ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಬಾವಿ ತೋಡಿಸಲು ಇಚ್ಛಿಸುವ ರೈತರುಗಳಿಗೆ ಮದರಾಸ್ ಸರ್ಕಾರದವರು ಮಾಡಿರುವಂತೆಯೇ ನಮ್ಮ ಸರ್ಕಾರದವರೂ ಸಹಾಯ ನೀಡಲು ಮೂರು ಲಕ್ಷ ರೂ ಮಂಜೂರ್ ಮಾಡಿದ್ದಾರೆ. ಅರ್ಧ ಹಣವನ್ನು ಉಚಿತವಾಗಿ ಕೊಡಲಾಗುವುದು. ಉಳಿದ ಅರ್ಧ ಹಣವನ್ನು ತಕಾವಿ ಸಾಲದಂತೆ ಹಿಂತಿರುಗಿಸಲಾಗುವುದು. ಮೂರು ವರುಷಕಾಲ ಆಹಾರ ಪದಾರ್ಥಗಳನ್ನು ಬೆಳೆಯುವುದಾಗಿ ರೈತರು ಭರವಸೆ ಕೊಡಬೇಕು.

ಪಂಜಾಬಿನಲ್ಲಿ ಮಿಶ್ರ ಮಂತ್ರಿ ಮಂಡಲ

ಕಾಂಗ್ರೆಸ್, ಯೂನಿಯನ್ ಮತ್ತು ಅಕಾಲೀ ಪಂಗಡದವರಿಂದ ಒಡಗೂಡಿದ ಮಿಶ್ರ ಮಂತ್ರಿಮಂಡಲವು ಪಂಜಾಬಿನಲ್ಲಿ ರಚನೆಯಾಗುವಂತೆ ತೀರ್ಮಾನವಾಗಿದೆ. ಮಂತ್ರಿಮಂಡಲವನ್ನು ಗೊತ್ತು ಮಾಡಲು ಈ ಪಕ್ಷದ ನಾಯಕರಾದ ಖಿಜರ್ ಹಯಾತ್ ಖಾನರವರಿಗೆ ಗೌರ್ನರು ಆಹ್ವಾನ ಕಳುಹಿದ್ದಾರೆ. ಆರು ಜನ ಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ.

ನಿಮ್ಮ ಮೈಮೊಗವು ಮಲ್ಲಿಗೆಯಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್!

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲಿಯೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Edited, printed and published by [illegible] at the Sadhvi Press D. Subbiah Road, Mysore.

ವಾರ್ತಾ ವಾ[illegible]

* ಪರ್ಷಿಯದಲ್ಲಿ ಇನ್ನೂ ರಷ್ಯ[illegible] ಇರುವುದಕ್ಕಾಗಿ ಪ್ರತಿಭಟನೆಯ[illegible] ಸಿ ರಷ್ಯಾಕ್ಕೆ ಪರ್ಷಿಯದ ಪ್ರ[illegible]ತ್ರ ಬರೆದಿದ್ದಾರೆ.

* ಸೈನಿಕರು ತಮ್ಮ ದಿನ[illegible] ವಾರಗಳನ್ನಾದರೂ ಬಿಟ್ಟು [illegible] ಹಾರ ಬೆಳೆಯುವ ಕಾರ್ಯದಲ್ಲಿ [illegible]ಗಳಿಗೆ ನೆರವಾಗಬೇಕೆಂದು ಭಾರತ [illegible]ರದವರು ತಿಳಿಸಿದ್ದಾರೆ.

* ಸಂಯುಕ್ತ ಪ್ರಾಂತ್ಯದ [illegible]ಯಲ್ಲಿ ಇದುವರೆಗೆ ಕಾಂಗ್ರೆಸ್ಸಿಗೆ [illegible]ಗೆ ೧ ಮತ್ತು ಸ್ವತಂತ್ರರಿಗೆ [illegible] ದೊರೆತಿವೆ ಒಟ್ಟು ಸಂಖ್ಯೆ [illegible]

* ಸ್ಪೇನ್ ದೇಶವು ಫ್ರಾನ್ಸಿನ[illegible]ನ್ನು ಮುಚ್ಚಿ ಬಿಟ್ಟಿದೆ. ಸಂಚಾರ[illegible] ಸಾಮಗ್ರಿಗಳ ರವಾನೆಯನ್ನು ನಡ[illegible] ಅಂಚೆ ಮತ್ತು ತಂತಿ ಸಂಬಂಧ[illegible]ಸ್ಸಿವೆ

* ಜಪಾನಿನಲ್ಲಿ ಪ್ರಜಾ ಪ್ರಭು[illegible]ತ್ವಿಯ ರಾಜ್ಯಾಂಗವನ್ನು ಸಿದ್ಧ [illegible]ದೆ. ಇದರ ಪ್ರಕಾರ ಪ್ರಜೆಗಳ [illegible]ಳ ಕೈಯಲ್ಲಿಯೇ ಎಲ್ಲಾ ಅಧಿ[illegible] ಇರುವುವು. ಮತ್ತು ವ್ಯವಸಾ[illegible] ನಿರ್ಮಾಣಕ್ಕೆ ಯುದ್ಧವನ್ನು ಕೈಸ[illegible] ಡದೆಂದೂ ವಿಧಾಯಕವಾಗಿರು[illegible]

* ಕಾಂಗ್ರೆಸ್ ಮಹಾ ಸಭೆಯ [illegible] ಕಾರ್ಯ ಮಂಡಲಿಯ ವಿಶೇಷ [illegible]ವು ಬೊಂಬಾಯಿಯಲ್ಲಿ ಈ [illegible]ನೇ ತಾರೀಕು ಸೇರುವುದು. ಬ್ರಿ[illegible] ಸರ್ಕಾರದ ನಿಯೋಗದವರ ಆಗಮ[illegible] ಚಾರವನ್ನು ಮುಖ್ಯವಾಗಿ ಪರಿ[illegible]ಗುವುದು.

* ಮುಸ್ಲಿಂ ಲೀಗಿನ ಶಕ್ತಿಯ[illegible]ಲಕ್ಷಿಸಿ ಪಂಜಾಬಿನ ಗೌರ್ನರು [illegible] ಗಡದವರಿಗೆ ಮಂತ್ರಿ ಮಂಡಲ [illegible] ಅವಕಾಶ ಕೊಟ್ಟಿರುವುದರಿಂದ [illegible]ರ್ಥವಾಗುವುದೆಂದು ಲೀಗ್ ಕಾ[illegible]ಗಳಾದ ಲಿಯಾಖತ್ ಅಲಿ ಖಾನ[illegible]ದ್ದಾರೆ

ಫ್ರೆಂಚ್ ಸೈನ್ಯಗಳು ಸೈಗಾ[illegible]ರಿಗೆ ಪ್ರವೇಶಿಸಲು ಪ್ರಯತ್ನಿಸಿ[illegible]ನ್ನೆ ಚೀನಾ ಸೈನ್ಯಗಳು ಅವುಗ[illegible] ಗುಂಡು ಹಾರಿಸಿದವು. ಫ್ರೆಂ[illegible]ಗಳೂ ಸಹಾ ಘಾತ ಮಾಡಿದವು [illegible] ಕಡೆಯೂ ಸಹಾ ಸಾವು ನೋವ[illegible]

* ಬೆಂಗಳೂರು ಡಿವಿಜನ [illegible] ರಿಜಿಸ್ಟ್ರಾರರಾದ ಶ್ರೀ ಎ. ಎ[illegible]ಯವರನ್ನು ಮೈಸೂರು ಡಿವಿಜನ್ನಿ[illegible]ಯಿಸಲಾಗಿದೆ

ಶ್ರೀ ಭೈರವೇಶ್ವರಸ್ವಾಮಿ ದೇ[illegible]

ರಾಜಧಾನಿಯ ದೊಡ್ಡಕೆರೆ [illegible]ರುವ ಶ್ರೀ ಭೈರವೇಶ್ವರಸ್ವಾಮಿ [illegible] ವಸ್ಥಾನದಲ್ಲಿ ಮಹಾಶಿವರಾತ್ರಿ [illegible] ದಿಗಳಂದ ಆಸ್ಥಾನ ವಿದ್ವಾನ್ [illegible] ಗರು, ಶ್ರೀಕಂಠಶಾಸ್ತ್ರಿಗಳು [illegible] ಹಳ್ಳಿ ನಾರಾಯಣ ಮೂರ್ತಿಯ[illegible] ಕೀರ್ತನ ಪೂಜೆಯು ನಡೆಯಿತು.

ದಳವಾಯ್ಸ್ ಸ್ಕೂಲ್

ದಳವಾಯ್ಸ್ ಸ್ಕೂಲಿನ [illegible] ವವು ಇದೇ [illegible] ನೇ ತಾರೀಖಿನ [illegible] ಸಂಜೆ ಶ್ರೀ [illegible] ರವರ ಅಧ್ಯಕ್ಷತೆಯಲ್ಲಿ ನಡೆ[illegible] ಶಾಲೆಯ ಪರೀಕ್ಷೆ [illegible] ಕೊಳ್ಳಲಾಗಿದೆ

ಫೋ॥ ನಂ 392॥ ವಂದೇ ಮಾತರಂ ! ಬಿಡಿಯ ಪತ್ರಿಕೆ 3 ಕಾಸು



ಸಂಪುಟ ೪] ಶನಿವಾರ ೯—೩—೪೬ [ಸಂಚಿಕೆ ೧೬೦

ಅನ್ನಾಂ ರಾಜ್ಯಕ್ಕೆ— —ಸ್ವಪ್ರಭುತ್ವಾಧಿಕಾರ

ಅನ್ನಾಮ್ ಸ್ವತಂತ್ರವಾಯಿತು

ಫ್ರೆಂಚ್ ಸರ್ಕಾರಕ್ಕೂ ಮತ್ತು ಅನ್ನಾಂ ನಾನ ನ್ಯಾಷನಲ್ ಪಕ್ಷದವರಿಗೂ ಒಂದು ಒಪ್ಪಂದವುಂಟಾಗಿ ಫ್ರೆಂಚ್ ಸರ್ಕಾರವು ಅನ್ನಾಂ ತನ್ನದೇ ಆದ ಸರ್ಕಾರವನ್ನು ನಡೆಸಿಕೊಳ್ಳಬಹುದೆಂದು ಅಜ್ಞೆ ಮಾಡಿ ಇನ್ನು ಮುಂದೆ ಅದು ಫ್ರೆಂಚ್ ಯೂನಿಯನ್ನಿನ ಸದಸ್ಯನಾಗಿ ಇರಬೇಕೆಂದು ಅಜ್ಞೆ ಹೊರಡಿಸಿದೆ.

ಬರ್ಲಿನ್ ಬ್ಯಾಂಕಿನ ಅಧಿಕಾರಿಗಳ ದಸ್ತಗಿರಿ

ರಷ್ಯಾ ದೇಶಕ್ಕೆ ಸೇರಿದ ಬರ್ಲಿನ್ ನಗರದ ಹಲವು ಪ್ರದೇಶಗಳಲ್ಲಿರುವ ಬ್ಯಾಂಕಿನ ಮುಖ್ಯಾಧಿಕಾರಿಗಳನ್ನು ರಷ್ಯನ್ ಸೈನಿಕರು ದಸ್ತಗಿರಿ ಮಾಡಿರುವರು. ಈ ದಸ್ತಗಿರಿಗೆ ನಾಜಿಗಳು ಬ್ಯಾಂಕುಗಳಲ್ಲಿ ಇಟ್ಟಿರುವ ಒಪ್ಪಂದದ ಫಿನ್ಯಾನ್ಶಿಯಲ್ ಕಾರಣವೆಂದೂ ಹೇಳಲಾಗಿದೆ. ಮೇಲ್ಕಂಡ ದಸ್ತಗಿರಿಗಳನ್ನು ಪತ್ರಿಕೆಗಳ ಮತ್ತು [illegible] ಬ್ಯಾಂಕುಗಳಲ್ಲೂ ಕಳೆದ ಜರ್ಮನ್ ಸರ್ಕಾರದ ಮುಚ್ಚಿದ [illegible]

ಕಾಂಗ್ರೆಸ್ ಕಮಿಟಿ ಪುನರ್ರಚನೆ

ನಂಜನಗೂಡು ೮

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಸದಸ್ಯರ ಸಭೆಯು ಶ್ರೀ ಎಸ್. ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆದು, ಕಾಂಗ್ರೆಸ್ ಕಮಿಟಿಯನ್ನು ಪುನರ್ರಚಿಸಿ ಈ ಸಮಿತಿಗೆ ಶ್ರೀ ಎಸ್. ನಾರಾಯಣರವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೆ. ಬಿ. ಗೌಡರನ್ನು ಉಪಾಧ್ಯಕ್ಷರನ್ನಾಗಿಯೂ [illegible] ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. [illegible] ಶ್ರೀ [illegible] ಎಸ್. [illegible] ಮತ್ತು [illegible] ಚುನಾಯಿಸಲ್ಪಟ್ಟಿದ್ದಾರೆ.

* ಜಗತ್ತಿನಲ್ಲೆಲ್ಲಾ ಅತಿ ದೊಡ್ಡ ದಿನ [illegible] [illegible]

ರಾತ್ರಿ ಕಾಲದಲ್ಲಿ ಲಾರಿಗಳ ಸಂಚಾರಕ್ಕೆ ಅವಕಾಶವಿಲ್ಲ

ಹಾಸನ ಜಿಲ್ಲೆಯಿಂದ ರಾತ್ರಿ ಹೊತ್ತು ಲಾರಿಗಳಲ್ಲಿ ಕಳ್ಳತನದಿಂದ ಸಾಮಾನುಗಳು ಸಾಗುತ್ತಿರುವುದನ್ನು ಗಮನಿಸಿ ಹಾಸನ ಜಿಲ್ಲಾಧಿಕಾರಿಗಳು ಒಂದಾಜ್ಞೆ ಹೊರಡಿಸಿ, ಹಾಸನ ಜಿಲ್ಲೆಯಲ್ಲಿ ರಾತ್ರಿ [illegible] ಗಂಟೆಯಿಂದ ಬೆಳಿಗ್ಗೆ [illegible] ಗಂಟೆಯವರೆಗೆ ರಸ್ತೆಗಳಲ್ಲಿ ಲಾರಿಗಳ ಸಂಚಾರವಿರಕೂಡದೆಂದೂ, [illegible] ಸಂಚಾರ ಮಾಡುವುದಕ್ಕೆ ಅಡ್ಡಿ ಇಲ್ಲವೆಂದೂ, ಲಾರಿಗಳನ್ನು [illegible] ಪೋಲೀಸ್ ಸ್ಟೇಷನ್ ಗಳ ಬಳಿ ನಿಲ್ಲಿಸಿ, ತಪ್ಪಿದರೆ ಅಪರಾಧ [illegible] ಈ ಆಜ್ಞೆಯನ್ನು ಉಲ್ಲಂಘಿಸಿದರೆ ತಕ್ಕ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದೂ ಸೂಚಿಸಿದ್ದಾರೆ.

ಬೆಂಕಿ ಅನಾಹುತ

ತುಮಕೂರು ೭

ನೆನ್ನೆ ಸಂಜೆ [illegible] ಕೃಷ್ಣಾಟಾಕೀಸಿನ ಹಿಂಭಾಗದ [illegible] ಬೆಂಕಿ ಹತ್ತಿಕೊಂಡು [illegible] [illegible] ಸಾವಿರ ರೂ [illegible] ನಷ್ಟವಾಗಿರುವುದೆಂದು ಅಂದಾಜು ಮಾಡಲಾಗಿದೆ.

ಸಿಟಿ ಕೋ-ಆಪರೇಟಿವ್ ಬ್ಯಾಂಕ್

ಮೈಸೂರು ಬ್ಯಾಂಕಿನ [illegible] ಸಭೆಯು [illegible] ಗಂಟೆಗೆ [illegible] ಶ್ರೀ [illegible] ಸಂಘದ [illegible] "ಕೃಷ್ಣಸಂಧಾನ" [illegible]

* ಶ್ರೀ [illegible] ಕಾಂಗ್ರೆಸ್ [illegible]

ಆಹಾರ ಸಮಸ್ಯೆಯಲ್ಲಿ ಸೈನ್ಯ ಶಾಖೆಯವರ ಸಹಾಯ

ಸ್ವಂತ ವರದಿ] ಬೆಂಗಳೂರು ೯

ದಕ್ಷಿಣ ಸೇನಾ ಶಾಖೆಯ ಮೇಜರ್ ಜನರಲ್ ಸ್ಕೋಂಗ್ ರವರು ಈ ದಿನ ಪತ್ರಿಕಾ ಸಮ್ಮೇಳನವನ್ನು ನಡೆಸಿ ಇಂಡಿಯ [illegible] ನಿವಾರಣೆಗಾಗಿ ತಮ್ಮ ಇಲಾಖೆಯವರು [illegible] ಸಹಾಯಗಳನ್ನು ನೀಡಲು ಸಿದ್ಧರಾಗಿರುವುದಾಗಿ ಭರವಸೆ ಇತ್ತರು. ಬರುವ ಅಕ್ಟೋಬರಿನಲ್ಲಿ ತಮ್ಮ ಸೈನ್ಯ ಕಛೇರಿಯು ಕೇಂದ್ರವು ಬೆಂಗಳೂರಿನಿಂದ ಪೂನಾ ನಗರಕ್ಕೆ ವರ್ಗಾಯಿಸಲ್ಪಡುವುದೆಂದು [illegible] ದರು.

ಏಪ್ರಿಲ್ ತಿಂಗಳಲ್ಲಿ ಬೆಂಗಳೂರು ರೇಸ್ ಕ್ಲಬ್ಬಿನ ಕಟ್ಟಡವನ್ನು ಕ್ಲಬ್ಬಿನವರಿಗೆ ಬಿಟ್ಟುಕೊಡಲಾಗುವುದು. ಅಕ್ಟೋಬರಿನಲ್ಲಿ [illegible] ಕಟ್ಟಡಗಳನ್ನು ಮಾಲೀಕರಿಗೆ ವಾಪಸು ಮಾಡಲಾಗುವುದು.

ಮದರಾಸಿನಲ್ಲಿ ಸೈನ್ಯದವರು ತಮ್ಮ [illegible] ಕೊಟ್ಟು [illegible] ಉಪಯೋಗಿಸಲು ನಿರ್ಧರಿಸಿರುವರು. ಟಿನ್ನುಗಳಲ್ಲಿ ಬರುವ ಹೆರ್ರಿಂಗ್ ಎಂಬ ಮೀನುಗಳನ್ನು [illegible] ಸರ್ಕಾರದವರು [illegible] ಕೊಡಲು ಸಿದ್ಧರಾಗಿದ್ದಾರೆ. [illegible] ಆ ಪತ್ರಿಕೆ ಕಟ್ಟಡಗಳನ್ನು ಮತ್ತು [illegible] ಕಟ್ಟಡಗಳನ್ನು ಒಂದು ವರ್ಷಕಾಲ ಮಾತ್ರ ನಮ್ಮ ಸ್ವಾಧೀನದಲ್ಲಿಟ್ಟುಕೊಂಡು ಅನಂತರ ಮೈಸೂರು ಸರ್ಕಾರದವರಿಗೆ ಮಾರಲು ಸಿದ್ಧರಾಗಿದ್ದೇವೆ— ಎಂದು ಅವರು ಹೇಳಿದರು.

ಈ ದಿನ ಮಂತ್ರಿ ಮಂಡಲದ ಸಭೆ ನಡೆಯುತ್ತಿದೆ.

[illegible] ಗ್ರಾಮಗಳಲ್ಲಿ ಸಭೆ ನಡೆಸಲು [illegible] ಶ್ರೀ ಎಸ್. [illegible] ರವರ ಮೇಲೆ [illegible] ನಿರ್ಬಂಧ [illegible]

[illegible] ಸಿಮೆಂಟನ್ನು [illegible] ನಿರ್ಬಂಧನ್ನು [illegible]

[illegible] ಡೆಪ್ಯುಟಿ ಪೋಲಿಸ್ [illegible] ಶ್ರೀ [illegible] ರವರು [illegible]

ಬೆಳಗಾವಿಯಲ್ಲಿ [illegible] ಸರಣಿ

[illegible] ಗುಂಡಿನೇಟಿನಿಂದ [illegible] ಜನರು [illegible]

ಪ್ರಶಾಂತ್ ಟಾಕೀಸ್
ಪ್ರತಿ ದಿನ ಮೂರು ಆಟಗಳು
8—3—46 ರಿಂದ
ಪಿತಾ ನ್
[illegible]

[illegible] ನೂತನ ಮಂತ್ರಿ ಮಂಡಲ

[illegible] ನೂತನ ಮಂತ್ರಿಮಂಡಲಕ್ಕೆ [illegible] ಕೆಳಕಂಡವರ ಹೆಸರು [illegible]

[illegible] ಖಾನ್ ಸಾಹೇಬ್ (ಮುಖ್ಯ [illegible] ಕಾಜಿ ಅತಾ ಉಲ್ಲಾಖಾನ್, [illegible] ಮೆಹರ್ ಚಂದ್ ಖನ್ನ [illegible] ಖಾನ್ ಮಹಮದ್ [illegible]

[illegible]

[illegible] ಸೈನಿಕರ ದೌರ್ಜನ್ಯ

[illegible] ಫ್ರೆಂಚ್ ಸೈನಿಕರು [illegible]

[illegible] ಕೃಷ್ಣರಾಜಮ್ಮಣ್ಣಿಯವರ ನಿಧನ

ಮಹಾರಾಜರವರ ಅಜ್ಜಿ

ಮೈಸೂರು ೯

[illegible] ಶ್ರೀ [illegible]

[illegible]

ಸಾಧ್ವಿ

ತಾ॥ ೯-೩-೪೬ ಶನಿವಾರ

ಮತ್ತೆ ದಂಡಿನ ಪ್ರಶ್ನೆ

ಬೆಂಗಳೂರು ದಂಡನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವ ಪ್ರಶ್ನೆಯು ಪುನಃ ಎದ್ದಿದೆ. ಈ ವಿಚಾರದಲ್ಲಿ ಪ್ರಸ್ತುತವಾದ ಸಮಾಲೋಚನೆ ನಡೆಯುತ್ತಿರುವುದಾಗಿ ತಿಳಿದು ಬಂದಿದೆ. ಕೇಂದ್ರ ಸರ್ಕಾರಕ್ಕೆ ನಮ್ಮ [illegible] ಈ ವಿಷಯವನ್ನು ಕುರಿತು [illegible] ಮಾಡಿದ್ದಾರೆಂದು ಹೇಳಲಾಗಿದೆ.

ಯುದ್ಧ ಕಾಲದಲ್ಲಿ ಈ ಪ್ರಶ್ನೆಯನ್ನು ಮೂಲೆಗೆ ಒತ್ತರಿಸಲಾಗಿತ್ತು. ಬ್ರಿಟಿಷ್ ಸರಕಾರದ [illegible] ಸ್ವಲ್ಪ ದಿನಗಳ [illegible] ಯುದ್ಧವು ಮುಗಿದ ತರುಣದಲ್ಲಿಯೇ ಮೈಸೂರಿಗೆ ಹಿಂದಿರುಗಿಸಬೇಕಾಗಿದ್ದ ದಂಡನ್ನು [illegible] ಇದಕ್ಕೆ [illegible] ಅವರು ಮೈಸೂರಿಗೆ ಸಲ್ಲಬೇಕಾದ ಹಕ್ಕನ್ನು ದೊರಕಿಸಿಕೊಡಲು [illegible] ಇದಕ್ಕಾಗಿ ಇಲ್ಲಿನ [illegible] ಅತ್ಯಂತ ಅಸ್ವಸ್ಥ್ಯಯುಂಟಾಗಿದೆ. [illegible] ದಂಡು ಮೈಸೂರಿನಲ್ಲಿ ಅಗಡಿತು. [illegible] ಮೈಸೂರು ಯುದ್ಧದಲ್ಲಿಯೂ, ಇತರ [illegible] ಬ್ರಿಟಿಷ್ ಸರ್ಕಾರಕ್ಕೆ [illegible] ಪ್ರಮಾಣವು [illegible] ಅದರ ರಕ್ಷಣೆಯನ್ನು [illegible] ತರವಲ್ಲ.

[illegible] ಈ ಪ್ರಶ್ನೆಯು [illegible] ಅನೇಕ [illegible] ಬ್ರಿಟಿಷ್ ಸರ್ಕಾರದವರೂ [illegible] ಇದು ನ್ಯಾಯಸಮ್ಮತವಾಗಿ ಪರಿಗಣಿಸುವರು ಆಗಲಿ.

ದಂಡನ್ನು ಮೈಸೂರಿಗೆ [illegible] ಮೈಸೂರಿನ ಪ್ರಜೆಗಳ ಆಕಾಂಕ್ಷೆಯು ಪ್ರಬಲವಾಗಿದೆ. [illegible] ಇದು ಇನ್ನು ಸ್ವಲ್ಪವೂ [illegible] ಬ್ರಿಟಿಷ್ ಸರ್ಕಾರದವರು [illegible] ಪ್ರಯತ್ನಿಸುವರೆಂದು ನಂಬುತ್ತೇವೆ.

— —

[illegible]

ನಂಜನಗೂಡು ೬

[illegible]

ಪತ್ರಿಕೆಗಳ ಪೋಲೀಸ ಠೇವಣಿ ಆಜ್ಞೆ ರದ್ದಾಯಿತು

ಸಂಯುಕ್ತ ಪ್ರಾಂತ್ಯದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯು ಒಂದು ಅತ್ಯಾಚಾರದ ಸಂಬಂಧದಲ್ಲಿ ಪ್ರಕಟಿಸಿದ್ದ ಲೇಖನವು ಆಕ್ಷೇಪಣೆಯುಳ್ಳದ್ದಾಗಿತ್ತೆಂದು ಪತ್ರಿಕಾ ಪ್ರಕಟಣಾ ಶಾಸನದ ಪ್ರಕಾರ ಮುದ್ರಣಾಲಯದಿಂದ ೬,೦೦೦ ರೂ. ಠೇವಣಿಗಳನ್ನೂ, ಮತ್ತು ನ್ಯಾಷನಲ್ ಹೆರಾಲ್ಡ್ ಪತ್ರಿಕೆಯು ೧೯೪೬ರ [illegible] ಸಂಬಂಧದಲ್ಲಿ ಪ್ರಕಟಿಸಿದ ಲೇಖನಕ್ಕಾಗಿ ೬,೦೦೦ ರೂ. ಠೇವಣಿ ಕೇಳಲಾಗಿತ್ತು. [illegible] ಸಂಪಾದಕರು [illegible] ಠೇವಣಿ ಆಜ್ಞೆ ರದ್ದುಗೊಳಿಸಬೇಕೆಂದು ಪ್ರಾರ್ಥಿಸಿದ್ದರ ಮೇಲೆ ಸರ್ಕಾರವು ಅದನ್ನು ಮನ್ನಿಸಿ ಠೇವಣಿ ಆಜ್ಞೆಗಳನ್ನು ರದ್ದುಗೊಳಿಸಿದ್ದಾರೆ.

—

[illegible] ನಡೆದ ಗಲಭೆಗಳಿಂದ [illegible] ಪತ್ರಿಕೆಗಳು ನಿನ್ನೆ ಪ್ರಕಟವಾಗಲಿಲ್ಲವೆಂದು ಹೇಳಲಾಗಿದೆ.

ರ ಣ ಜಿ ತ್

10—3—46 ರಿಂದ

ರಾಗಿಣಿ ಮತ್ತು ಜಯಂತ್

ಪಾತ್ರ ವಹಿಸಿರುವ

ಷಿರಿನ್ — ಫರಾದ್

ಪ್ರತಿ ದಿನ ಮೂರು ಆಟಗಳು

ಶ್ರೀಮಂತರಿಗೂ ಪರ್ತಕರಿಗೂ

— —

1619 ಚದರಡಿ ಜಾಗದಲ್ಲಿ

ಸುಮಾರು ೧೨೦ ರೂ. ಬಾಡಿಗೆ

ಬರುವ ಅತ್ಯುತ್ತಮ ಜಾಗದಲ್ಲಿ

ಜಗನ್ಮೋಹನ ಬಂಗ್ಲೆ ಎದುರು

ಬೆಲೆ ೩೯,೫೦೦ ರೂ.

ಹೆಚ್ಚು ವಿವರಗಳಿಗೆ ಸ್ವಂತ ಬರೆಯಿರಿ

ಬಿ. ಎಸ್. ಸುಬ್ಬರಾವ್,

ಜಗನ್ಮೋಹನ ಬಂಗ್ಲೆ ಬೀದಿ

ಮೈಸೂರು

ಗಾನಸಿಂಹರ ಬಿಡಾರದ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರದ

ಮ್ಯಾನೇಜಿಂಗ್ ಕಮಿಟಿ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಮತ್ತು ಕಮಿಟಿ ಮೆಂಬರುಗಳ ಸನ್ನಿಧಾನಂಗಳಿಗೆ—

ಮೇಲ್ಕಂಡ ಮಂದಿರದಲ್ಲಿ ೧೩ ವರ್ಷಗಳಿಂದ ಕ್ಲಾರ್ಕ್ ಮತ್ತು ಸಬ್‌ಸ್ಕ್ರಿಪ್ಷನ್ ಕಲೆಕ್ಟರ್ ನೌಕ್ರಿ ಮಾಡಿದ ಎಸ್. ಮೂರ್ತಿರಾವ್ ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ

ಒಂದನೇ ಅರಿಕೆ—ನಾನು ಕಷ್ಟಪಟ್ಟು ನೌಕ್ರಿ ಮಾಡಿದ ಬಾಬ್ತು ಕಾರಣಾಂತರದಿಂದ ನಿಂತಿರುವ ಒಂದೂವರೆ ವರ್ಷದ ಬಾಬ್ತು ಸಂಬಳ ೬೧॥ ರೂ. ಗಳು ನನಗೆ ಸಂದಾಯವಾಗುತ್ತೆಂದು ಬರೆದು ಕೊಡುತ್ತೇನೆ. ನನ್ನಿಂದ ರಾಮಮಂದಿರಕ್ಕೆ ೩೧ ರೂ. ಗಳು ಜಮಾ ಮಾಡಿಕೊಂಡು ನನಗೆ ಲೈಫ್ ಮೆಂಬರಾಗಿರುವಂತೆ ಮಾಡಿಸಿಕೊಡಬೇಕಾಗಿಯೂ,

ಎರಡನೇ ಅರಿಕೆ— ರಾಮಮಂದಿರದಲ್ಲಿ ಜನರಲ್ ಸೆಕ್ರೆಟರಿಯವರಾಗಿದ್ದ ಮ॥ ರಾ॥ ಲಾಯರು ಎಸ್. ಕೆ. ರಾಮಾಚಾರ್ಯರವರು ಕಾರಣಾಂತರದಿಂದ ೧-೯-೪೩ ರ ಬಾಗಾಯಿತು ೧೯೪೩ ನೇ ಇಸವಿ ಜುಲೈ ಮಾಹೆಯ ವರೆಗೆ ಒಂದು ವರ್ಷದ ಅಕೌಂಟ್ ನನ್ನಿಂದ ಬೇರೆ ಪುಸ್ತಕದಲ್ಲಿ [illegible] ಮಾಡಿಸಿ ಪೆಂಡಿಂಗ್‌ನಲ್ಲಿರುವ [illegible] ಸಂಬಳ ೧೫ ಕೊಡಿಸುತ್ತೇನೆಂದು, [illegible] ಮಾಡಿರುವ ೧೫ ರೂ. ॥೯. ಇವರ ಕಾಲದ ೭ ತಿಂಗಳು [illegible] ಮಾಡಿದ ಬಾಬ್ತು ೬ ತಿಂಗಳು [illegible] ೮-೦ ರೂ. ಪ್ರಕಾರ ಚೆಕ್ ಕೊಟ್ಟು [illegible] ಬಾಕಿ ನಿಂತಿರುವ ೯-೬-೦ [illegible] ೬-೦ ಗಳು ದಯವಿಟ್ಟು ಕೊಡಿಸಬೇಕಾಗಿಯೂ,

ಮೂರನೇ ಅರಿಕೆ—[illegible] ನೌಕ್ರಿ ಕೊಡುವುದೂ ಕೊಡದೇ [illegible] ಕಮಿಟಿಯವರಿಗೆ ಸೇರಿದ್ದಂತಲೂ,

ಮೇಲ್ಕಂಡ ಮೂರು ಅರಿಕೆಗಳ [illegible] ಇಟ್ಟು ನಡೆಸಿಕೊಡಬೇಕೆಂದು [illegible] ರಲ್ ಸೆಕ್ರೆಟರಿಯಾಗಿರುವ [illegible] ಡ್ವೊಕೇಟ್ ಡಿ. ಕಪನಿಪತಿರಾ[illegible] ಅವರಿಗೆ ತಾ॥ ೧೪-೮-೪೪ ರಲ್ಲಿ [illegible] ಕೇಸ್ ತಾ॥ ೨೧-೧೨-೪೫ ರಲ್ಲಿ [illegible] ೨೨-೧-೪೬ ರಲ್ಲಿ ಎರಡನೇ [illegible] ೮-೨-೪೬ ರಲ್ಲಿ ಕೊನೇ ನೋಟೀ[illegible] ನಾಲೆಡ್ಜ್‌ಮೆಂಟ್ ಮತ್ತು ಪೋ[illegible] ಡ್ ಮೂಲಕ ಅರಿಕೆ ಮಾಡಿಕೊ[illegible] ಉತ್ತರ ಬರದೇ ಇದ್ದದ್ದು ನೋಡಿ[illegible] ಪತ್ರಿಕೆಯಲ್ಲಿ ೧೩-೨-೪೬ ರಲ್ಲಿ [illegible] ಮಾಡಿಸಿದರೂ ಅದಕ್ಕೂ ಉತ್ತರ[illegible] ಅಪ್ಪ ಮಹನೀಯರುಗಳು ನನ್ನ[illegible] ಮಾಡಿ ಕೊಡುತ್ತೇನೆಂದು ಹೇಳ[illegible] ರೆ ೨೦-೨-೪೬ ರಲ್ಲಿ ಉಪವಾಸ ವ್ರ[illegible] ರೆ ನಿಲ್ಲಿಸಿ ಸಾಧ್ವಿ ಪತ್ರಿಕೆಯ [illegible] ಕೆ ಮಾಡಿಸಿದಾಗ್ಯೂ ಉತ್ತರ ಬರ[illegible] ಆದಕಾರಣ ನನ್ನ ಮನವಿಗಳು [illegible] ಮನಕ್ಕೆ ಜನರಲ್ ಸೆಕ್ರೆಟರಿಯವ[illegible] ದ್ದರೆ ನನಗೆ ಉತ್ತರ ಬರುತ್ತಿತ್ತು [illegible] ಮೌನ ವ್ರತವನ್ನು ತಾಳಿದರು [illegible] ವಾಸ ವ್ರತವನ್ನು ತಾಳಿದೆ. [illegible] ವಾಸ ವ್ರತ ಬಿಟ್ಟರೂ ತಾವು [illegible] ಬಿಡಲಿಲ್ಲ. ಈಗಲಾದರೂ [illegible] ಮೂರು ಅರಿಕೆಗಳನ್ನು [illegible] ದಿಟ್ಟ ತೀರ್ಮಾನಿಸಿ ಸದುತ್ತರವನ್ನು [illegible] ಪಾಲಿಸಬೇಕಾಗಿ ಈ ಮೂಲಕ [illegible] ಡಿಕೊಂಡಿರುತ್ತೇನೆ.

ತಮ್ಮಾಗಿನ ವಿಧೇ[illegible]

೮-೩-೪೬. ಎಸ್. ಮೂರ್ತಿ[illegible]

ಉತ್ತಮ ವರ್ಗದ ಅರಗಿನ ಪದಾರ್ಥಗಳು

ವಿಧವಿಧ ವರ್ಗದ ಸೂಪರಿನ ಅರಗು,

ಗುಂಡಿ ಅರಗು, ಹೊಂಬಣ್ಣದ

ವ್ಯಾರ್ನಿಶ್ ಸ್ಟಿಕ್ ಮತ್ತು ಬ್ಲೀಚ್

ಮಾಡಿದ ಅರಗು, ಬಣ್ಣರಹಿತ ಪಾಲಿಷ್

ಫ್ರೆಂಚ್ ಪಾಲಿಷ್‌ಗಳು, ಬಣ್ಣದ

ಪಾಲಿಷ್‌ಗಳು ಮತ್ತು ಇತರ

ಅರಗಿನ ಪದಾರ್ಥಗಳು

ವಿವರಗಳಿಗಾಗಿ ಬರೆಯಿರಿ.—

ಸರಕಾರದ ಅರಗು ಮತ್ತು ಬಣ್ಣದ ಕಾರಖಾನೆ

ಊಟಗಿ, : : ಮೈಸೂರ

ನಂಜನಗೂಡು ಮೊದ[illegible] ದನಗಳ ಪ್ರದರ್ಶನ

೧೪-೩-೪೬ ರ ಬಾಗಾಯಿತು ೧[illegible] ರವರಿಗೆ ದೊಡ್ಡ ಜಾತ್ರೆ ರಥೋತ್ಸವ[illegible] ಧರ್ಮದಲ್ಲಿ, ದನಗಳ ಪ್ರದರ್ಶನವ[illegible] ಊರಿನ ಬೋರ್ಡ್ ಆಫೀಸಿನಲ್ಲಿ ನ[illegible] ತ್ತೆ. ಸೀಲ್. ನರ್ರವ ಸೌಕರ್ಯ[illegible] ಗಿದೆ. ರಾಸುಗಳಿಗೆ ಮುಂಕವಿತ್ತ [illegible] ಹಾಯ ಏರ್ಪಡಿಸಿದೆ. ಉತ್ತಮ[illegible] ಗೆ ಬಹುಮಾನ ಕೊಡಲಾಗುತ್ತೆ.

ಎ. ಎ. ಕೃಷ್ಣ[illegible]

ಪ್ರೆಸಿಡೆಂಟ್

ಟೌನ್ ಮುನಿಸಿಪಲ್ [illegible]

ನಂಜನಗೂ[illegible]

ಮೈಸೂರು ನಗರದ ಆಧುನಿಕ ಫಲಾಹಾರ ಮಂದಿರ !

' ನೆಹರೂ ಲಂಚ್ ಹೋಮ್ '

ಮೈಸೂರು ಡೆವೇರಿಯನ್ ಮಾರ್ಕೆಟ್ ಚೌಕದಲ್ಲಿರುವ

ಜಯ ಭಾರತ ಭವನದಲ್ಲಿ

ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿ ಸರ್ವಜನಾದರಣೀಯವಾದ

ರೀತಿಯುಳ್ಳ ಮೇಲ್ದರ್ಜೆಯ ಫಲಾಹಾರ ಮಂದಿರವು

10 3—46 ನೇ ಭಾನುವಾರದಿಂದ

ಪ್ರಾರಂಭವಾಗುವುದು.

ಮಹಾಜನರ ಸಹಾಯ ಪ್ರೋತ್ಸಾಹವ ಕೋರಲ್ಪಡುತ್ತದೆ.

ಮಹ್. ಮುನ್ನೀಲಾಲ್,

ಪ್ರೊಪ್ರೈಟರ್.

Edited, printed and published by A. S. Nagarajan at the Sadhvi [illegible] D Subbiah Road, Mysore

ಫೋನ್ ನಂ 3321 ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಭಾನುವಾರ ೧೦—೩—೪೬ [ಸಂಚಿಕೆ ೧೬೧

ಪೋರ್ಚುಗೀಸರೇ ಭಾರತ ಬಿಟ್ಟು ಹೊರಡಿ

...ಕ್ಕೆ ಅಮೇರಿಕದ ಒತ್ತಾಯ

...ಯಿಂದ ತಮ್ಮ ಸೈನ್ಯಗಳನ್ನು ...ತ ನಾವಶ್ಯ ಕರೆಸಿಕೊಳ್ಳಬೇಕೆಂದು ...ದ ಸರ್ಕಾರವು ಒತ್ತಾಯಪಡಿಸಿದೆ ...ರಾಜ್ಯಗಳು ಇತರ ರಾಜ್ಯಗಳ ಸ್ವಾ...ನ್ನು ಗೌರವಿಸಬೇಕಾದ ಭಾರ...ಯನ್ನು ಹೊತ್ತಿರುವುದೆಂದೂ ...ಪ್ಪ ತಿಳಿಸಿರುತ್ತದೆ.

ಜರ್ಮನಿ ಹಡಗುಗಳ ಹಂಚಿಕೆ

...ನಲ್ಲಿ ನಡೆದ ತ್ರಿರಾಷ್ಟ್ರ ನೌಕಾ ...ಒಪ್ಪಂದದಂತೆ ಜರ್ಮನಿಯ ...ಎಲ್ಲವನ್ನೂ ರಷ್ಯ, ಅಮೇರಿಕಾ ಮ...ಗ್ರೇಟ್ ಬ್ರಿಟನ್ ದೇಶಗಳು ಸಮ ಭಾಗ ...ತಮ್ಮಲ್ಲಿ ಹಂಚಿಕೊಂಡಿವೆ ...ಪ್ಯಾಪಾರೀ ಹಡಗು ಸುಮಾರು ...೦೦೦ ಪೌಂಡುಗಳಷ್ಟು ಬೆಲೆ ...ದ. ಬ್ರಿಟನ್ನು ತನ್ನ ಪಾಲಿಗೆ ಹಡಗು ಮತ್ತು ಮೂವತ್ತು ಯು...ಗಳನ್ನು ಫ್ರೆಂಚರಿಗೆ ಕೊಡುವುದ...ಪೋಲ್ಯಾಂಡ ಇನ್ನಿತರ ರಾಷ್ಟ್ರಗ...ನ್ನೀತು.

ಉದಾರ ದಾನ

...] ಬೆಂಗಳೂರು ...ಮಂಗಲದ ತಾಲ್ಲೋಕು ಬೆಂಗಳೂರು ...ಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ...ವಿದ್ಯಾರ್ಥಿ ಸಂಘವು ದಿನೇ ದಿ...ವೃದ್ಧಿಯಾಗುತ್ತದೆ. ಇದೇ ಗ್ರಾ...ಗಣಾದ ಶ್ರೀಮಾನ್, ಪಿ ಪದ್ಮ...ಯ್ಯನವರು ೫ ಕುಂಟೆ ಜಮೀನನ್ನೂ ...ಸುಮಾರು ೧೧೦೦ ರೂ ಬೆಲೆ ಬಾ...) ಎಡಿಕೆ ವೆಂಕಟಪ್ಪನವರು ೫ ಕುಂ...ಂಗಡಿ ನಾಗಂಜಯ್ಯನವರು ...ಜಮೀನನ್ನೂ ಉದಾರ ದಾನ ...ತ್ತಿರೆ.

ತನಿಖೆ

...ಗದ ಮ್ಯಾಜಿಸ್ಟ್ರೇಟರು ಕ...ಹಿಂದೆ ಆದ ಬಸ್ ಅನಾಹು...ಕ್ಕಾಗಿ ಆಗಮಿಸಿದ್ದರು. ಪ...ಸ್, ಬಸ್ ಮಾಲೀಕರೂ-ಪೋ...ಸ್ಪೆಕ್ಟರೂ ಸ್ಥಳದಲ್ಲಿ ಹಾಜರಿ...ಗಳನ್ನು ವಿವರಿಸಿದರು.

ಕಾಂಗ್ರೆಸ್ ಚುನಾವಣೆ

...ನಗರದ ಕಾಂಗ್ರೆಸ್ಸಿನ ಕಾರ್ಯ...ಮತ್ತು ಮೈಸೂರು ...ಕಾರ್ಯಕಾರೀ ಸಮಿತಿಗೆ ನಗರದ ...ನ್ನ ಆರಿಸಲು ತಾ ೧೧...ರ ಸಂಜೆ ಆರು ಗಂಟೆಗೆ ಕಾಂ...ಕಛೇರಿಯಲ್ಲಿ ಚುನಾವಣೆಯನ್ನು ... ಆಯಾಯ ವಾರ್ಡುಗಳ ...ತದ ಪ್ರತಿನಿಧಿಗಳೆಲ್ಲರೂ ...ಬೇಕೆಂದು ಕಾರ್ಯದರ್ಶಿಗಳು ...

...ಕೆಲಸಗಾರರ ಸಂಘ

ಮೈಸೂರು

...ಸರ್ಕಾರದ ಜನರಲ್ ಸೆಕ್ರೆ...ಮೈಸೂರು ಕಾರ್ಮಿಕ ...ಮೈಸೂರು ಹೊಟೇಲು ಕೆಲಸ...ವನ್ನು ರಿಜಿಸ್ಟರ್ ಮಾಡಿಸಲು ...ಲೇಬರ್ ಕಮೀಷನ...ಆದೇ ... ಸಂಘ ...ರಿಜಿಸ್ಟರ್ ಆಗಿದೆ. ಹೋ...ರೆಲ್ಲರೂ ಹೆಚ್ಚು ಮೆಚ್ಚಾ...ಸಂಘದ ಸದಸ್ಯರಾಗಬೇಕೆಂದು ... ಪ್ರಾರ್ಥಿಸುತ್ತಾರೆ.

ಪಂಜಾಬಿನಲ್ಲಿ ಗೋಲೀಬಾರು

ಪಂಜಾಬಿನ ಗವರ್ನರು ಲೀಗ್ ಪಂಗಡದ ನಾಯಕರನ್ನು ಮಂತ್ರಿಮಂಡಲ ರಚಿಸಲು ಆಹ್ವಾನಿಸಿದೆ ಮಿಶ್ರಪಕ್ಷದ ನಾಯಕರಾದ ಮಲ್ಲಿಕ್ ಖಿಜಾರರವರನ್ನು ಆಹ್ವಾನಿಸಿದ್ದನ್ನು ಪ್ರತಿಭಟಿಸಲು ಲಾಹೋರಿನ ಮುಸ್ಲಿಂ ಲೀಗ್ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದಾಗ ಪೋಲೀಸರು ಮೆರವಣಿಗೆಯನ್ನು ಚದುರಿಸಲು ಪ್ರಯತ್ನಿಸಿ ವಿಫಲರಾಗಿ ಗುಂಡು ಹಾರಿಸಿದರೆಂದೂ, ತತ್ಪರಿಣಾಮವಾಗಿ ಐದು ವಿದ್ಯಾರ್ಥಿಗಳಿಗೆ ಗಾಯವಾಗಿದೆಯೆಂದು ವರದಿ ಬಂದಿದೆ. ಮುಸ್ಲಿಂ ಮೊಹಲ್ಲಾಗಳಲ್ಲಿ ಸಂಚಾರ ನಿರ್ಬಂಧವನ್ನು ಜಾರಿಗೆ ತರಲಾಗಿದೆ. ಮುಸ್ಲಿಂ ವಿದ್ಯಾರ್ಥಿಗಳು ಇಂಡಿ...ಕಾಲೇಜುಗಳಿಗೆ ಪಿಕೆಟಿಂಗ್ ಹಾಕಿದ್ದಾರೆ.

ಬ್ರಿಟನ್ನಿಗೆ ಕೆನಡಾದ ಸಾಲ

ಬ್ರಿಟಿಷ್ ಕೆನಡಾ ಸರ್ಕಾರದಿಂದ ೧೨೫ ಕೋಟಿ ಡಾಲರ್ ಸಾಲವನ್ನು ಪಡೆದಿರುವುದಾಗಿ ಬ್ರಿಟಿಷ್ ಮಂತ್ರಿ ... ತಿಳಿಸಿದ್ದಾರೆ. ಈ ಸಾಲವನ್ನು ೫೦ ವರ್ಷಗಳಲ್ಲಿ ತೀರಿಸುವುದಾಗಿ ಒಪ್ಪಂದವಾಗಿದೆಯೆಂದು ಅವರು ವಿವರಣೆ ಇತ್ತಿದ್ದಾರೆ.

ಭಾರತಕ್ಕೆ ಆಸ್ಟ್ರೇಲಿಯಾದ ಅಕ್ಕಿ

ಆಸ್ಟ್ರೇಲಿಯಾದಿಂದ ಇಂಗ್ಲೆಂಡಿಗೆ ಕಳುಹಿಸಬೇಕೆಂದಿರುವ ೨೫,೦೦೦ ಟನ್ ಅಕ್ಕಿಯನ್ನು ಭಾರತಕ್ಕೆ ಮತ್ತು ಸಿಲೋನಿಗೆ ಕಳುಹಿಸಲಾಗುವುದೆಂದು ಬ್ರಿಟನ್ನಿನ ಆಹಾರ ಮಂತ್ರಿಯು ತಿಳಿಸಿರುವರು. ಇದಲ್ಲದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಉಂಟಾಗಿರುವ ಕ್ಷಾಮದಲ್ಲಿ ತಮ್ಮ ದೇಶದವರು ಆದಷ್ಟು ಕಡಿಮೆ ಅಕ್ಕಿಯನ್ನು ಉಪಯೋಗಿಸಬೇಕೆಂದೂ ತಿಳಿಸಿರುವರು.

ಸಿನಿಮಾ ಮಂದಿರ ಭಸ್ಮವಾಯಿತು

ದಕ್ಷಿಣ ಎನಾರ್ಕುಲಂನಲ್ಲಿ ಸಿನಿಮಾ ಮಂದಿರವೊಂದು ಅಗ್ನಿದೇವನಿಗೆ ಆಹುತಿಯಾದ ಸುದ್ದಿ ಬಂದಿದೆ. ಚಿತ್ರದ ಪ್ರದರ್ಶನ ನಡೆಯುತ್ತಿದ್ದಾಗ ಫಿಲಂ ಬೆಂಕಿ ಹತ್ತಿಕೊಂಡು, ಅದೇ ಎಲ್ಲಾ ಕಡೆಗೂ ಹಬ್ಬಿ ಥಿಯೇಟರ್ ಮಂದಿರವು ಭಸ್ಮವಾಗಿದೆ. ಆದರೆ ಪ್ರಾಣಹಾನಿಯು ಸಂಭವಿಸಲಿಲ್ಲವೆಂದು ತಿಳಿದಿದೆ.

* ಆಹಾರ ಧಾನ್ಯಗಳನ್ನು ವಾಸ್ತವ ... ಸಂದರ್ಭದಲ್ಲಿ ಮಾಡಿದ್ದ ಕೇಸು ... ಮರಣ ದಂಡನೆ ಶಿಕ್ಷೆ ವಿಧಿಸ್ಪ ... ಆಸ್ಟ್ರಿಯಾ ಸರ್ಕಾರ ... ಸಿದೆ

ಪೋರ್ಚುಗೀಸರು ಭಾರತದಿಂದ ಹೊರಡಬೇಕು

ಭಾರತದಲ್ಲೆಲ್ಲಾ 'ಕ್ವಿಟ್ ಇಂಡಿಯಾ' ಘೋಷಣೆ ಕೇಳಿಬರುತ್ತಿರುವಾಗ ನಾವು ಸುಮ್ಮನೆ ಕೂಡಬಾರದೆಂದು ಗೋವಾ ಕಾಂಗ್ರೆಸ್ಸಿನವರು ಧೀರ ತೀರ್ಮಾನವೊಂದನ್ನು ಮಾಡಿ ತಕ್ಷಣ ಗೋವಾ, ದಮನ್, ಡಾಮನ್ ದ್ವೀಪಗಳಲ್ಲಿರುವ ಪೋರ್ಚುಗೀಸರು ಭಾರತದ ಗಡಿ ಬಿಟ್ಟು ಅವರ ದೇಶಕ್ಕೆ ತೆರಳಬೇಕೆಂದು ಕೊನೆಯ ಎಚ್ಚರಿಕೆ ಇತ್ತಿದ್ದಾರೆ. ತಮ್ಮ ದೇಶದ ಸ್ಥಿತಿಗತಿಯನ್ನು ಭಾರತದ ತೀರ್ಮಾನದೊಂದಿಗೆ ಸರಿ ಹೊಂದಿಸಿಕೊಳ್ಳಬೇಕೆಂದು ನಿರ್ಣಯಿಸಿದ್ದಾರೆ. ಭಾರತದಲ್ಲೂ, ಹೊರಗೂ ಇರುವ ಎಲ್ಲ ಗೋವಾ ಜನಗಳೂ ಈ ನಿರ್ಧಾರಕ್ಕೆ ಬೆಂಬಲವಿತ್ತು ಮಾತೃಭೂಮಿಯ ಬಂಧವಿಮೋಚನೆ ಮಾಡಬೇಕೆಂದೂ ಪ್ರಾರ್ಥಿಸಲಾಗಿದೆ.

ಹಂಗೇರಿಯಲ್ಲಿ ಎಣ್ಣೆಗಣಿಗಳ ನಾಶ.

ಹಂಗೇರಿಯಲ್ಲಿ ಅಮೇರಿಕದವರ ಅಧೀನದಲ್ಲಿರುವ ಎಣ್ಣೆಗಣಿಯೊಂದನ್ನು ರಷ್ಯನರು ನಾಶಪಡಿಸಿದರೆಂದು ವರದಿಯಾಗಿದೆ. ಇದರಿಂದ ೨೫ ಲಕ್ಷ ಡಾಲರ್ ನಷ್ಟ ಸಂಭವಿಸಿದೆಯೆಂದು ಊಹಿಸಲಾಗಿದೆ.

ಬಿಹಾರಿನಲ್ಲಿ ಕಾಂಗ್ರೆಸ್ ವಿಜಯ

ಬಿಹಾರಿನಲ್ಲಿ ಇದುವರೆಗೆ ಕಾಂಗ್ರೆಸ್ ೯೩, ಸ್ವತಂತ್ರರು ೯, ಲೀಗ್ ೩ ಸ್ಥಾನಗಳನ್ನು ಗಳಿಸಿವೆ. ಇನ್ನೂ ನಾಲ್ಕು ಸ್ಥಾನಗಳ ಚುನಾವಣೆ ಹೊರಬಿದ್ದಿಲ್ಲ. ಈ ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪನೆಯಾಗಲಿದೆ.

ಲಂಡನ್ ಕೌನ್ಸಿಲಿಗೆ ಭಾರತೀಯ

ಲಂಡನ್ ನಗರ ಸಭೆಗೆ ಡಾ|| ... ಕಟ್ಯಾಲ್ ಎಂಬ ಭಾರತೀಯರು ಲೇಬರ್ ಪಕ್ಷದ ಅಭ್ಯರ್ಥಿಯಾಗಿ ... ಮತದಿಂದ ಆರಿಸಲ್ಪಟ್ಟಿದ್ದಾರೆ. ಇದಕ್ಕೆ ಹಿಂದೆ ಹಿಸ್ಟರ್ ... ನಗರಸಭೆಯ ಮೇಯರಾಗಿ ಆಗಿದ್ದರು.

೩ ಹೆಂಗಸರು ಬೆಂಕಿಗೆ ಪಾಲಾದರು

... ಬೇಗನೆ ... ಮನೆಯೊಂದಕ್ಕೆ ಬೆಂಕಿ ತಗುಲಿದ್ದು ... ಹೆಂಗಸರು ... ಮತ್ತು ... ಗಂಡಸರಿಗೂ, ... ವಿಪರೀತ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಆಗ್ನೇಯ ಏಷ್ಯಾದಲ್ಲಿ ಯುದ್ಧವೇ?

ಇಂಡೋನೇಷಿಯಾದ ಪ್ರಕರಣ ಬಗೆಹರಿಯದೆ ಮುಂದುವರಿಯುತ್ತಿದೆ. ಯೂರೋಪ ಯುದ್ಧ ಮುಕ್ತಾಯವಾಗಿ ಪರಿಸ್ಥಿತಿ ತಿಳಿಯಾಗುತ್ತಿರುವಾಗ ಆಗ್ನೇಯ ಏಷ್ಯಾದಲ್ಲಿ ಯುದ್ಧ ಸೂಚಕ ಕಿಡಿಗಳು ಕಾಣಿಸಿಕೊಂಡಂತೆ ಹರಡುವ ಸೂಚನೆಗಳು ಕಂಡುಬರುತ್ತಿವೆ. ಡಚ್ ಸರ್ಕಾರ ತನ್ನ ಸಾಮ್ರಾಜ್ಯತ್ವವನ್ನು ಸ್ಥಿರಪಡಿಸಿಕೊಳ್ಳುವ ಸಂಕಲ್ಪ ಮಾಡಿರುವಂತೆ ತೋರುತ್ತದೆ. ೨೦ ಸಾವಿರ ಸೈನ್ಯಗಳನ್ನು ಡಚ್ ಸರ್ಕಾರ ಇಂಡೋನೇಷಿಯಾಕ್ಕೆ ಕಳುಹಿಸಲು ಸಿದ್ಧಪಡಿಸಿ ಈಗಾಗಲೇ ೩ ಸಾವಿರ ಸೈನ್ಯಗಳು ಬಟೇವಿಯಾ ಬಂದರನ್ನು ತಲುಪಿರುವುದು ಪರಿಸ್ಥಿತಿಯನ್ನು ಕೆಡಿಸಿ ರಾಜಕೀಯ ಅಪರಾಧದ ... ಕುತೂಹಲವನ್ನುಂಟುಮಾಡಿದೆ. ಡಚ್ ಸರ್ಕಾರದ ಈ ನೀತಿಯನ್ನು ಇಂಡೋನೇಷಿಯ ಸರ್ಕಾರ ಪ್ರತಿಭಟಿಸಿದೆ. ಬಟೇವಿಯಾದ ತೀವ್ರ ರಾಷ್ಟ್ರೀಯವಾದಿಗಳಿಗೂ ... ಸೈನಿಕರಿಗೂ ಘರ್ಷಣೆ ಸಂಭವಿಸಬಹುದೆಂದು ಊಹಿಸಲಾಗಿದೆ. ಅಧ್ಯಕ್ಷ ಡಾ|| ಸೋಕಾರ್ನೋರವರು ಈ ಬಗ್ಗೆ ಮಧ್ಯದಲ್ಲೇ ... ತಿಳಿಸಿದ್ದಾರೆ.

ರಷ್ಯಾಕ್ಕೆ ಟರ್ಕಿಯ ಷರತ್ತು

ಟರ್ಕಿಯವರು ಸಧ್ಯದಲ್ಲಿಯೇ ಮೆಡಿಟರೇನಿಯನ್ ಲೀಗ್ ಎಂಬುದನ್ನು ಸ್ಥಾಪಿಸಿ ಅದರಲ್ಲಿ ಫ್ರಾನ್ಸ್, ಗ್ರೀಸ್, ಇಟಲಿ ಮತ್ತು ಫ್ರಾಂಕೋ ಸ್ಪೇನ್ ಬಿಟ್ಟ ನಂತರ ಅಲ್ಲಿಯ ಪ್ರತಿನಿಧಿಯರನ್ನೂ ಈ ಲೀಗಿಗೆ ಸೇರಿಸಿಕೊಳ್ಳುವರೆಂದೂ, ಟರ್ಕಿಯು ರಷ್ಯನ್ನು ಕೊಡಲಿರುವ ಈ ಕುತಂತ್ರ ಸಂಕಲ್ಪಗಳು ಸಂಭವಿಸಿ ನಡೆಯಲಿರುವ ಪಿತ್ರ ಸಂಸ್ಥೆಯ ಸಭೆಯು ಮುಂದೆ ಮಂಡಿಸಲಾಗುವುದೆಂದೂ ಪ್ಯಾರಿಸ್, ರೋಮ್ ಮತ್ತು ಕೈರೋ ನಗರಗಳಲ್ಲಿ ಹೇಳಲಾಗಿದೆ.

ಹೆಂಡತಿಯ ಕೊಲೆ ಪ್ರಯತ್ನ

... ಬಂಡುಬಾಳಯ್ಯ ಎಂಬುವನು ನಾಗಮ್ಮ ಎಂಬ ತನ್ನ ಹೆಂಡತಿಯನ್ನು ... ಕಾರಣಕ್ಕಾಗಿ ... ಚಾಕು ಹಿಡಿದು ... ಜೀವಸಹಿತ ಸುಡಲು ಪ್ರಯತ್ನಿಸಿದರೂ ಅಷ್ಟರಲ್ಲೇ ... ಮನೆಯವರು ಬಂದು ಬಿಡಿಸಿದರೆಂದು ವರದಿಯಾಗಿದೆ. ಆಕೆ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಳೆ. ಆತ ದಸ್ತಗಿರಿಯಾಗಿ ಬಂಧಿಸಲ್ಪಟ್ಟಿದ್ದಾನೆ.

ಬೆಂಗಳೂರಿನಲ್ಲಿ ಮುಷ್ಕರವೇ?

ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿ ಕೆಲಸಗಾರರ ಸಂಘದವರು ... ನೋಟೀಸ್ ... ಕಂಪನಿ ಆಡಳಿತವರ್ಗದವರ ... ಗಾರಿ ಮುಷ್ಕರ ಹೂಡುವ ವಿಚಾರದಲ್ಲಿ ... ಮೂಲಕ ಕೆಲಸಗಾರರ ಅಭಿಪ್ರಾಯ ... ಸ್ಪಷ್ಟಮಾಡಬೇಕೆಂದು ಸೂಚಿಸಿದ್ದಾರೆ.

ಕಲ್ಯಾಣಮಾನವಕ್ಕೆ ಅಕ್ಕಿ

... ಕಲ್ಯಾಣ ... ಜನ ... ಸೇರಿಸುವುದೆಂದು ... ಗಿದೆ.

* ... ಸ್ವೀಡನ್ ... ಆಸ್ಟ್ರೇಲಿಯದ ... ಕ್ರೀ ... ವಾಗುವುದು ಅಗತ್ಯವೆಂದು ರಷ್ಯ ಒತ್ತಾಯಪಡಿಸಿದೆ

ಸಾಧ್ವಿ

ತಾ॥ ೧೦-೩-೪೬ ಭಾನುವಾರ

ಅಸಹಕಾರವ್ರೋ, ಅವಿಧೇಯತೆಯೋ?

ಈ ದಿನ ನಡೆಯಲಿರುವ ಬೆಂಗಳೂರು ಪೌರ ಸಭೆಯ ಉಪ ಚುನಾವಣೆಗೆ ಕಾರ್ಯಕ್ರಮದಲ್ಲಿ ಸಹಕಾರ ನೀಡಲು ಸಾಧ್ಯವಿಲ್ಲವೆಂದು ಹಲವು ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿಸಿದರೆಂದು ಗೊತ್ತಾಗಿದೆ. ಶಿವಮೊಗ್ಗೆಯ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ನಂತರ ಇಂತಹ ಪ್ರಸಂಗಗಳು ಬರುವುದಿಲ್ಲವೆಂದು ನಾವು ನಂಬಿದ್ದೆವು. ಭಿನ್ನಾಭಿಪ್ರಾಯಗಳ ಮೂಲ ಕಾರಣವು ನಿವೃತ್ತಿಯಾದರೂ ಅವರ [illegible] ಇನ್ನೂ ತಮ್ಮ ಪ್ರಭಾವವನ್ನು ಬೀರುತ್ತಲೇ ಇರುವಂತಿದೆ.

ಬೆಂಗಳೂರು ನಗರದ ಪೌರ ಸಭಾಧ್ಯಕ್ಷ ಪ್ರಕರಣವು ಶ್ರೀ॥ ಘಾಸ್ಯಂ ರವರ ರಾಜೀನಾಮೆಯಲ್ಲಿ ಪರಿಣಮಿಸಿತು; ಅನಂತರ ಪೌರ ಸಭಾ ಸದಸ್ಯರು ರಾಜೀನಾಮೆ ಇತ್ತರು; ಆಮೇಲೆ ಕೆಲಸಗಾರರು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವನ್ನು ಕರೆಸಿದರು; ಅಲ್ಲಿ ಸರ್ವ ಸಮ್ಮತವಾದ ಒಪ್ಪಂದವಾಯಿತು; ಶ್ರೀ॥ ಘಾಸ್ಯಂ ರವರು ಮತ್ತೆ ಸ್ವಸ್ಥಾನಕ್ಕೆ ಬಂದರು. ಇಲ್ಲಿಗೆ ಈ ಅಧ್ಯಾಯವು ಮುಕ್ತಾಯವಾಗಬೇಕಾದುದು ಸಹಜ.

ಉಪ ಚುನಾವಣೆಯಲ್ಲಿ ಸಹಕರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರು ಸಹಜವಾದ ರೀತಿಯಲ್ಲಿ, ಲೋಕಾಭಿರಾಮವಾಗಿ, ಉಪಚಾರದಿಂದಲೇ ಕೆಲಸಗಾರರನ್ನು ಪ್ರಾರ್ಥಿಸಿದರು. ಇದು ಕೇವಲ ಪ್ರಾರ್ಥನೆಯಲ್ಲ; ಕಾಂಗ್ರೆಸ್ಸಿನ ಆಜ್ಞೆ. ಅದನ್ನು ಹಲವು ಕೆಲಸಗಾರರು ನಿರಾಕರಿಸಿದರೆಂದರೆ, ಅದು ಬರೀ ಅಸಹಕಾರ ಮಾತ್ರವಲ್ಲದೆ ಅವಿಧೇಯತೆ-ಎಂದೇ ಹೇಳಬೇಕು.

ವಾದ ವಿವಾದಗಳೂ, ಭಿನ್ನಾಭಿಪ್ರಾಯಗಳೂ ಇಷ್ಟು ದೂರ ಹೋಗುವುದು ಶುದ್ಧ ಅನುಚಿತ. ಅತ್ತೆ ಮೇಲಿನ ಕೋಪವನ್ನು ಕೊತ್ತಿ ಮೇಲೆ ತೋರುವುದೇ? ಇವರು ಕೊಡುವ ಸಹಕಾರವು ಶ್ರೀ॥ ಸಿದ್ದಲಿಂಗಯ್ಯನವರಿಗೇ? ಸುಬ್ರಹ್ಮಣ್ಯಂ ರವರಿಗೇ? ಘಾಸ್ಯಂ ರವರಿಗೇ? ಅಥವಾ ಈಗ ನಿಂತಿರುವ ಹಲವು ಉಮೇದುವಾರರಿಗಾಗಿಯೇ? ಇವು ಯಾವುದೂ ಅಲ್ಲ. ಸಹಕಾರವು ಸಂಸ್ಥೆಗೆ, ದೇಶಕ್ಕೆ ಸಹಕಾರವು ಒಂದು ಸೇವೆ; [illegible] ಇದನ್ನು ಸಕಲರೂ [illegible]. ಸಂಸ್ಥೆಯನ್ನು ಬಿಟ್ಟರೆ ವ್ಯಕ್ತಿಗಳಿಗೆ ಎಳ್ಳಷ್ಟು ಬೆಲೆಯಿಲ್ಲ. ಗಾಂಧೀಜಿಯಂತಹ ಮಹಾತ್ಮರೂ ಕಾಂಗ್ರೆಸ್ ಸಂಸ್ಥೆಗಿಂತ ಮಿಗಿಲೆನಿಸಲಿಲ್ಲವೆಂದ. [illegible] ಇದನ್ನು [illegible] ತಮ್ಮ ವ್ಯಕ್ತಿತ್ವವನ್ನು ಮೂಲೆಗೊತ್ತಿ ಪಕ್ಷ, ಸಂಸ್ಥೆ ಮತ್ತು ದೇಶದ ಸೇವೆಯಲ್ಲಿ ತೊಡಗಬಾರದೇ?

• [illegible]

' ನೆಹ್ರೂ ಲಂಚ್ ಹೋಂ '
ಆರಂಭೋತ್ಸವ

ವಾಣೀ ವಿಲಾಸ ಚೌಕದಲ್ಲಿರುವ ಜಯ ಭಾರತ ಕಟ್ಟಡದಲ್ಲಿ, ಈ ದಿನ ಬೆಳಗ್ಗೆ ' ನೆಹ್ರೂ ಲಂಚ್ ಹೋಂ ' ಫಲಾಹಾರ ಮಂದಿರದ ಆರಂಭೋತ್ಸವವನ್ನು, ರೇಷನ್ ಅಧಿಕಾರಿಗಳಾದ ಶ್ರೀ ವೆಂಕಟಶಿವರೆಡ್ಡಿಯವರು ನಡೆಸಿದರು. ಪ್ರಾರ್ಥನೆಯಾದನಂತರ, ಮಂದಿರದ ಮಾಲೀಕರಾದ ಶ್ರೀ ಮುನ್ನಿಲಾಲ್ ರವರು ಅಧ್ಯಕ್ಷರನ್ನು ಸ್ವಾಗತಿಸಿ, ಮಂದಿರದ ಮುಖ್ಯ ಧ್ಯೇಯಗಳನ್ನು ವಿವರಿಸಿದರು.

ಶ್ರೀ ವೆಂಕಟಶಿವರೆಡ್ಡಿಯವರು ಮಾತನಾಡುತ್ತಾ, ಈ ಆಹಾರ ಅಭಾವದಲ್ಲಿಯೂ ಕೂಡ ಈ ಮಂದಿರವನ್ನು ತೆರೆಯಲು ಏಕೆ ಅವಕಾಶಕೊಟ್ಟದ್ದನ್ನು ವಿಶದವಾಗಿ ತಿಳಿಸಿದರು. ಶ್ರೀ ಮುನ್ನಿಲಾಲ್‌ರವರಿಗೆ ೧॥ ವರ್ಷದ ಹಿಂದೆಯೇ ಲೈಸೆನ್ಸ್ ಕೊಡಲಾಗಿತ್ತೆಂದೂ, ಕಾರಣಾಂತರಗಳಿಂದ ಅದು ಮುಂದುವರಿಯಲ್ಪಟ್ಟು, ಈಗ ಅದು ಕಾರ್ಯರೂಪಕ್ಕೆ ತರಲಾಯಿತೆಂದೂ ಹೇಳಿದರು. ಮಿಶ್ರಾಹಾರ ಸಾಮಗ್ರಿಗಳನ್ನು ಉಪಯೋಗಿಸಿ, ಗೋಧಿ, ಸುರುಳಿ, ಕಡಲೆ ಇವುಗಳ ಉಪಯೋಗವನ್ನು ಜನತೆಯಲ್ಲಿ ಹೆಚ್ಚು ಬಳಕೆಯಲ್ಲಿ ಬರುವಂತೆ ಮಾಡುವ ಮುಖ್ಯೋದ್ದೇಶದಿಂದ ತಿಂಡಿ ಸಾಮಾನುಗಳನ್ನು ತಯಾರಿಸುವರೆಂಬ ಭರವಸೆ ಮೇಲೆ ಶ್ರೀ ಮುನ್ನಿಲಾಲ್‌ರಿಗೆ ಅವಕಾಶ ಕೊಡಲಾಯಿತೆಂದು ತಿಳಿಸಿ ಸಾರ್ವಜನಿಕರಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗಲೆಂದು ಹಾರೈಸಿ ಮಂದಿರದ ಆರಂಭೋತ್ಸವವನ್ನು ನೆರವೇರಿಸಿದರು. ಉಪಾಹಾರ ಮತ್ತು ವಂದನೆಯೊಡನೆ ಉತ್ಸವವು ಕೊನೆಗೊಂಡಿತು.

ನಂಜನಗೂಡು ದೊಡ್ಡ ಜಾತ್ರೆ
ದನಗಳ ಪ್ರದರ್ಶನ

೧೪-೩-೪೬ ರ ಲಾಗಾಯ್ತು ೧೮-೩-೪೬ ರವರಿಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಜೋಗಿ ತೋಟದಲ್ಲಿ ಏರ್ಪಡಿಸಿರುತ್ತೆ. ನೀರು ನೆರಳಿನ ಸೌಕರ್ಯ ಚೆನ್ನಾಗಿದೆ. ರಾಸುಗಳಿಗೆ ಸುಂಕವಿಲ್ಲ. ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣಯ್ಯ,
ಪ್ರೆಸಿಡೆಂಟ್,
ಟೌನ್ ಮುನಿಸಿಪಲ್ ಕೌನ್ಸಿಲ್,
ನಂಜನಗೂಡು

ವಾರ್ತಾ ವಾಹಿನಿ

• ಮೈಸೂರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಶ್ರೀ ಸಿಂಗಾರವೇಲು ಮೊದಲಿಯಾರರು ನಿವೃತ್ತರಾಗುವ ಮುನ್ನ ರಜ ಪಡೆಯಲಿರುವರೆಂದೂ ಆ ಸ್ಥಾನಕ್ಕೆ ಶ್ರೀ ಸುಲ್ತಾನ್ ಮೊಹಿಯುದ್ದೀನರು ನೇಮಿಸಲ್ಪಡಬಹುದೆಂದೂ ಊಹಿಸಲಾಗಿದೆ.

• ಮಂಚೂರಿಯಾದಿಂದ ರಷ್ಯ ಸೇನೆ ವಾಪಸಾಗಬೇಕೆಂದು ಚೀಣಾದ ೬೦ ಸಂಸ್ಥೆಗಳು ನಿರ್ಣಯ ಮಾಡಿವೆ.

• ಬಿಹಾರಿನ ಬೆಗುಸರಾಯ್ ಸಬ್ ಡಿವಿಜನ್ನಿನಲ್ಲಿ ಒಂದು ಭವ್ಯವಾದ ದೇವಾಲಯವನ್ನು ಕಟ್ಟಿ ಅದರಲ್ಲಿ ಗಾಂಧೀ ಪ್ರತಿಮೆಯನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಿಸಲಾಗಿದೆ.

• ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕೆಲಸಗಾರರಿಗೆ ವಿಜಯೋತ್ಸವದ ಸಲುವಾಗಿ ಎರಡು ತಿಂಗಳ ಬೋನಸ್ ಕೊಡಲಾಗುವುದೆಂದು ಹೇಳಲಾಗಿದೆ.

• ಬಟೇವಿಯಾಕ್ಕೆ ಮತ್ತೆ ೩೦೦೦ ಡಚ್ ಸೈನಿಕರು ಬಂದಿಳಿದರು. ಪರಿಸ್ಥಿತಿ ಕುತೂಹಲಕರವಾಗಿದೆ.

ಜಾಲಹಳ್ಳಿ ಆಸ್ಪತ್ರೆ ನಗರ ಮೈ॥ ಸರ್ಕಾರಕ್ಕೆ ಕೊಡಲಾಗುವುದು

ಜಾಲಹಳ್ಳಿಯಲ್ಲಿರುವ ಹಾಸ್ಪಿಟಲ್ ಟವನನ್ನು ಇನ್ನು ಒಂದು ವರ್ಷಕಾಲ ಮಿಲಿಟರಿ ಹತೋಟಿಯಲ್ಲಿಟ್ಟುಕೊಂಡಿದ್ದು ಅನಂತರ ಅದನ್ನು ಮೈಸೂರು ಸರ್ಕಾರಕ್ಕೆ ಬಿಟ್ಟುಕೊಡುವುದಾಗಿಯೂ; ಬೆಂಗಳೂರು ರೇಸ್‌ಕೋರ್ಸ್ ಮತ್ತು ಕುಮಾರಾ ಪಾರ್ಕುಗಳನ್ನು ಏಪ್ರಿಲ್ ೧ ಕ್ಕೆ ಬಿಟ್ಟುಕೊಡುವುದಾಗಿಯೂ, ಸದರೀ ಆಫೀ ಕೇಂದ್ರವು ನೆಪ್ಟೆಂಬರ್ ಗೆ ಪೂನಾಕ್ಕೆ ವರ್ಗವಾಗಿ ಹೋಗುವುದೆಂದೂ, ಜನರಲ್ ಆಫೀಸರ್ ಮೇ॥ ಜ॥ ಎ. ಎಚ್ ಜೆ ಸ್ನೆಲ್ಲಿಂಗ್‌ರವರು ನಿನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ರಣಜಿತ್

10—3—46 ರಿಂದ

ರಾಗಿಣಿ ಮತ್ತು ಜಯಂತ್

ಪಾತ್ರ ವಹಿಸಿರುವ

ಷಿರಿನ್ — ಫರಾದ್

ಪ್ರತಿ ದಿನ ಮೂರು ಆಟಗಳು

ಮೈಸೂರು ನಗರದ ಆಧುನಿಕ ಫಲಾಹಾರ ಮಂದಿರ !

' ನೆಹರೂ ಲಂಚ್ ಹೋಮ್ '

ಮೈಸೂರು ವಾಣೀವಿಲಾಸ ಮಾರ್ಕೆಟ್ ಚೌಕದಲ್ಲಿರುವ

ಜಯ ಭಾರತ ಭವನದಲ್ಲಿ

ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿ ಸರ್ವಜನಾದರಣೀಯವಾದ ರೀತಿಯಲ್ಲಿ ಮೇಲ್ಕಂಡ ಫಲಾಹಾರ ಮಂದಿರವು

10 3—46 ನೇ ಭಾನುವಾರದಿಂದ

ಪ್ರಾರಂಭಿಸಲ್ಪಟ್ಟಿರುವುದು.

ಮಹಾಜನರ ಸಾದರ ಪ್ರೋತ್ಸಾಹವು ಕೋರಲ್ಪಟ್ಟಿದೆ.

ಹೆಚ್. ಮುನ್ನೀಲಾಲ್,
ಪ್ರೊಪ್ರೈಟರ್.

ಮಹಾತ್ಮರ ಉಪದೇ[illegible]

ಮೈಸೂರಿನಲ್ಲಿ ಕಾರ್ಯರೂಪಕ್ಕೆ [illegible]

[illegible]ರಿಂದ, ಆನಂದಕ್ಕಾಗಿ ಈಗ [illegible]ಗಿಸುತ್ತಿರುವ ಉದ್ಯಾನ ವನಗಳ[illegible]ರಿ ಬೆಳೆಯುವಂತಾಗಬೇಕೆಂದು [illegible] ಗಾಂಧೀಜಿ ವೈಸರಾಯರಿಗೆ [illegible] ಅದರಂತೆ ಅನುಸರಿಸಲು ಇಂಡಿಯ[illegible]ಕಾರದ ಉದ್ಯಾನ ವನಗಳ [illegible] ಆ ಮಾರ್ಗ ಅನುಸರಿಸಿದೆ.

ಮೈಸೂರು ನಗರದಲ್ಲಿ ಸರ[illegible]ಕತದಲ್ಲಿರುವ ಎಲ್ಲಾ ತೋಟಗಳ[illegible]ಕಾರಿ ಬೆಳೆಸಲು ಪ್ರಾರಂಭವಾಗಿ[illegible]ಗಾಗಲೆ ಕೃಷ್ಣರಾಜ ಮತ್ತು ಚಲು[illegible] ಆಸ್ಪತ್ರೆಗಳ ಉದ್ಯಾನವನಗಳ [illegible] ತರಕಾರಿ ಬಿತ್ತನೆ ನಡೆದಿದೆ [illegible]ನಗಳ ಯುವಕ ಅಧಿಕಾರಿ ಶ್ರೀ ಮ[illegible]ರು ತುಂಬಾ ಉತ್ಸಾಹದಿಂದ ಕ[illegible]ಡಿಸುತ್ತಿದ್ದಾರೆ. ಇವರ ಈ ಕೆ[illegible]ಸ್ವಿಯಾಗುವುದರಲ್ಲಿ ಸಂಶಯವಿ[illegible]

ಖಾಸಗೀ ಮತ್ತು ಪೌರಸಭೆ[illegible]ನ ವನಗಳೆಲ್ಲಾ ಈ ರೀತಿ ಅನು[illegible] ದೇಶದ ಹಿತಸಾಧನೆಗೆ ನೆರವಾಗು[illegible]

ಕ್ಷಾಮದಿಂದ ೭೦ ಲಕ್ಷ ಜ[illegible] ಪ್ರಾಣ ಭಯ

ಕೂಡಲೇ ಭಾರೀ ಪ್ರಮಾಣ[illegible] ಮತ್ತು ಇತರ ಆಹಾರಗಳನ್ನು [illegible]ಸ್ಥಾನಕ್ಕೆ ಕಳುಹಿಸಿ ಕೊಡದಿದ್ದರೆ [illegible]ಕ್ಕಿಂತಲೂ ಹೆಚ್ಚಿನ ಸಂಖ್ಯೆಯ [illegible]ರೂ ಮುಸಲ್ಮಾನರೂ ಮರಣಕ್ಕೆ [illegible]ಗುವರು-ಎಂಬುದಾಗಿ ಅಮೇರಿಕದ [illegible] ಹೆರ್ಬರ್ಟ್ ಹೂವರ್ ಎಂಬುವರು [illegible]ಲೇ ಸಹಾಯ ಮಾಡಬೇಕೆಂದು [illegible]ದ್ದಾರೆ.

ಸಬ್ ಇನ್ಸ್‌ಪೆಕ್ಟರುಗ[illegible] ರಾಜೀನಾಮೆ

ನಾಗಪುರದ ಸಬ್ ಇನ್ಸ್‌ಪೆಕ್ಟರ್ [illegible]ಲಾಲ್ ಮಿಶ್ರ ಎಂಬುವರು ಕಾ[illegible]ಯಾಕರೊಬ್ಬರಿಗೆ ಹಾರ [illegible] ಸೂಪರಿಂಟೆಂಡೆಂಟರು ಸಮಜಾ[illegible] ಕೇಳಲು ಲಕ್ಷ್ಮಣಲಾಲರು ತಮ್ಮ [illegible] ರಾಜೀನಾಮೆ ಇತ್ತಿರುವರು. ಕಾಂ[illegible] ಸಗಾರರ ಹಾವಳಿಯು ಏನೇ [illegible]ಣವಾಗುತ್ತಿರುವುದೆಂದೂ ಯಾವ[illegible]ಲ್ಲಾದರೂ ಬಹಿರಂಗವಾದ [illegible] ಬಹುದೆಂದೂ ಅದನ್ನು ಅದಗಿ[illegible]ಲ್ಲಿರುವ ಪೋಲೀಸ್ ಪಡೆಯು ಸಾ[illegible] ಸೂಚಿಸಿ ಅಜೀಜ್ ಅಹಮದ್ [illegible]ತ್ತೊಬ್ಬ ಸಬ್ ಇನ್ಸ್‌ಪೆಕ್ಟರೂ [illegible]ನಾಮೆ ಇತ್ತಿರುವರು.

ಜಾವಾದಲ್ಲಿ ಶಾ[illegible]

ಇನ್ನು ಹದಿನೈದು ದಿನಗಳ[illegible] ನೇಷಿಯನರು ಜಾವಾದಲ್ಲಿ ಸ[illegible]ರ್ಕಾರವನ್ನು ಮಾಡಬಹುದೆಂ[illegible] ನಿರೀಕ್ಷಿಸಿರುವುದಾಗಿ ಇಂಡೊನೇ[illegible] ಅಧ್ಯಕ್ಷರಾದ ಡಾ॥ ಸುಕ[illegible] ಹೇಳಿರುವರು. ಬ್ರಿಟಿಷ್ ಸ[illegible] ಹೋರಾಟವನ್ನು ನಿಲ್ಲಿಸಲು ಸ[illegible]ಡಚ್ ಮತ್ತು ಇಂಡೊನೇಷ್ಯ[illegible]ರಿಗಳ ಮಾತುಕತೆಗೆ ಅವಕಾ[illegible]ಕೆಂದು ಕೋರಲಾಗುವುದು.

Edited, printed and pu[illegible] A. R. Nagarajan at the Sadh[illegible] D. ...ubbiah Road, Mysore

ಪೋ। ಫಂ ೩೯೨॥ WEEKLY EDITION ಬಿಡಿ ಪತ್ರಿಕೆ ೮ ಕಾಸು

ಸಂಪುಟ ೧೦] ಸೋಮವಾರ ೧೧—೩—೪೬ [ಸಂಚಿಕೆ ೨೬

ಇಂಡೊನೇಷಿಯದಿಂದ — ಬ್ರಿ॥ ಸೇನೆ ವಾಪಸ್ —

ಸಂತೋಷ ಕೂಟ

ಮೈಸೂರು ೧೧

...ತ್ರ ಇಲಾಖೆಯ ಅಂಚೆ ಮತ್ತು ಕೆಳ ...ಮ್ನ ನೌಕರ ಮಾಸ್ತೇರುಗಳ, ಬೇಡಿಕೆ ...ಕೇಂದ್ರ ಸರಕಾರದವರಿಂದ ಸರಿಯಾ ...ರೀತಿಯಲ್ಲಿ ನಡೆಸಿ ಕೊಡಲ್ಪಡದಿದ್ದ ಪ ...ಈ ದಿನದಿಂದ ಸಮಗ್ರ ಹಿಂದೂ ...ದೇಶದಲ್ಲೆಲ್ಲಾ ಏಕಕಾಲ ಮುಷ್ಕರ ಹೂಡು ...ವ ವ್ಯವಸ್ಥಿತ ಕಾರ್ಯಕ್ರಮ ಕೈಗೊ ...ಳ್ಳುವ ನಿರ್ಧಾರವಾಗಿತ್ತಷ್ಟೆ. ಆದರೆ ನಿ ...ನ್ನೆಯ ಪ್ರಾತಃಕಾಲ "ರಾಜಧಾನಿಯ ...ಯೂನಿಯನ್ ಅಧ್ಯಕ್ಷರವರು ಮದ್ರಾಸಿನ ...ಯೂನಿಯನ್ನಿಗೆ ಮುಷ್ಕರ ಸಂ ...ಬಂಧವಾಗಿ ಆಫೀಸ್ ಸಲಹೆಗಳ ಬಗ್ಗೆ ತಂ ...ತಿಸಿ ಮುಷ್ಕರವು ಅನಾವಶ್ಯಕ' ...ಎಂಬುದನ್ನು ತಿಳಿಸಿಕೊಂಡರು. ಈ ...ಕಾರಣವಾಗಿ ಸ್ಥಳೀಯ ಯೂನಿಯನ್ನಿನ ...ನಿನ್ನೆಯ ದಿನ ರಾತ್ರಿ ಶ್ರೀ ಚಾಮುಂ ...ಡಿ ಭವನದಲ್ಲಿ ಒಂದು ಸಂತೋಷಕೂಟ ...ವನ್ನೇರ್ಪಡಿಸಿಕೊಂಡಿದ್ದರು. ಪೋಸ್ಟ್ ...ಮಾಸ್ಟರ್ ಜನರಲ್ ಸೂಪರಿಂಟೆಂಡೆಂಟಾದ ಶ್ರೀ ಬೀ. ನ ...ರಸಿಂಹ ಪಿಳ್ಳೆಯವರೂ, ಪೋಸ್ಟ್ ...ಆಫೀಸಿನವರೂ ಇತರೇ ಅಂಚೆ ಅಧಿಕಾರ ...ವರ್ಗ ಪತ್ರಿಕೋದ್ಯೋಗಿಗಳೂ ಆ ...ಗಮಿಸಿದ್ದರು

...ನಿಲಯ ಆಕಾಶವಾಣಿ ಗಾನ ಕಲಾ ...ವಿದರಿಂದ ಸಂಗೀತ ಕಛೇರಿ ನ ...ಡೆಯಿತು. ಅನಂತರ ಮೈಸೂರ್ ಯೂ ...ನಿಯನ್ ಅಧ್ಯಕ್ಷರವರಾದ ಮಿ॥ ಮೀರ್ ...ಮಸ್ತೇರವರು, ಕೇಂದ್ರ ಸರಕಾರ ...ದ ಯೂನಿಯನ್ನಿನ ಬೇಡಿಕೆಗಳನ್ನೆ ...ಲ್ಲ ವಹಿಸಿ ಕೆಲವನ್ನು ಮಾತ್ರ ...ಒಪ್ಪಿಕೊಂಡಿರುವನ್ನು ಒಂದು ಸಂಚಾ ...ರ ಕಾರ್ಮಿಕರಿಗೆ ಬಿಟ್ಟು ಪ್ರಕೃತ ಮುಷ್ಕ ...ರವನ್ನು ಹೋಗಲಾಡಿಸಿದ್ದಾರೆ. ...ಈ ಕೇಂದ್ರ ಸರಕಾರವು ಅಭಿನಂದಿ ...ಸಲಾಗಿದೆ

...ಈ ಸಂಚಾರವು ಕೇವಲ ತಾತ್ಕಾಲಿ ...ಕವಾದರೂ ಪಂಚಾಯತಿಯ ತೀ ...ರ್ಮಾನ ಕೇವಲ ಏಕ ಪಕ್ಷವಾದದ್ದಾದರೆ ...ಮತ್ತೆ ವ್ಯವಸ್ಥಿತ ಮುಷ್ಕರ ನಡೆಯ ...ಬಹುದು. ಆದರೆ ಆ ರೀತಿಯ ಸಂ ...ದರ್ಭ ಒದಗದಿರಲೆಂದು ಆಶಿಸುತ್ತೇನೆ. ...ಕೊನೆಗೆ ಎಲ್ಲರನ್ನೂ ಸ್ವಾಗತಿಸಿ ...ಮುಖ್ಯ ಅತಿಥಿಗಳಾಗಿದ್ದ ಪೋಸ್ಟ್ ...ಮಾಸ್ಟರವರು ಸಾಲೋಚಿತ ಭಾಷಣ ...ಮಾಡಿದ ನಂತರ ವಂದನೆಯೊಡನೆ ಸಭಾ ...ಕಾರ್ಯ ಮುಕ್ತಾಯಗೊಂಡಿತು.

ಶಿಲಾನ್ಯಾಸನೋತ್ಸವ

...ದೇವಸ್ಥಾನದ ಧರ್ಮ ...ದ ಗುರುವಾರ ಸಾಯಂಕಾಲ ...ದ ಕಟ್ಟಡಕ್ಕೆ ಸಂಬಂಧಪಟ್ಟ ...ದ ಸಮಾರಂಭವನ್ನು ನೆರವೇರಿ ...ಸಲು ಮಾಡಿರುತ್ತಾರೆ. ಶ್ರೀ ...ಪ್ರಸಾದ್ ಜೋಗೋರಿಯವರು ...ವನ್ನು ನೆರವೇರಿಸುವರು.

ಚುನಾವಣೆ

...ಕಾಂಗ್ರೆಸ್ ಮೈಸೂರು ಜಿ ...ಲ್ಲೆ ಕಾಂಗ್ರೆಸ್ ಸಮಿತಿಯ ಸದ ...ಸ್ಯರನ್ನು ಮೈಸೂರು ಕಾಂಗ್ರೆಸ್ ...ಸಮಿತಿಯ ಜಿಲ್ಲಾ ಪ್ರತಿನಿಧಿಯ ...ದ ದಿನಾಂಕ ೧೮-೩-೪೬ ನೇ ...ಸಂಜೆ ೬ ಗಂಟೆಗೆ ಪೇ ...ಟೆಯ ಕೆಳಗಿನ ಭಾಗದಲ್ಲಿ ...ಸಿಟಿ ಕಾಂಗ್ರೆಸ್ ಪಾರ್ಟಿ [illegible]

ಚಿನ್ನದ ಗಣಿ ದಿನಾಚರಣೆ

ಮಂಡ್ಯ ೧೧

ನೆನ್ನೆ ಸಂಜೆ ಮಂಡ್ಯದ ಸಕ್ಕರೆ ಕಂಪೆನಿಯ ಕೂಲಿಗಾರರು ಚಿನ್ನದ ಗಣಿಯ ಮುಷ್ಕರಕಾರರಿಗೆ ಸಹಾನುಭೂತಿ ತೋರಿಸಲು ಶ್ರೀ ಮರಿಸ್ವಾಮಿಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಶ್ರೀ ಎ. ರಾಮಣ್ಣನವರು ಸಭೆಯ ಉದ್ದೇಶವನ್ನು ವಿವರಿಸಿ ಶ್ರೀ ಹೆಚ್. ಸಿ. ದಾಸಪ್ಪನವರನ್ನು ಸಭೆಗೆ ಪರಿಚಯ ಮಾಡಿದರು. ಶ್ರೀ ದಾಸಪ್ಪನವರು ಭಾಷಣ ಮಾಡುತ್ತಾ ಚಿನ್ನದ ಗಣಿಯ ಮುಷ್ಕರಕಾರರು ತಮ್ಮ ನ್ಯಾಯವಾದ ಬೇಡಿಕೆಗಳು ಇಡೇರದಿದ್ದುದರಿಂದ ಮುಷ್ಕರ ಹೂಡಿರುವರೆಂದೂ ಮುಂದೆ ಸರ್ಕಾರವನ್ನು ರಚಿಸುವವರು ಕೂಲಿಗಾರರೆಂದೂ ತಿಳಿಸಿ ಸಕ್ಕರೆ ಕಂಪೆನಿ ಕೂಲಿಗಾರರು ಗಣಿ ಕೂಲಿಗಾರರಿಗೆ ತಮ್ಮ ಒಂದು ದಿನದ ಕೂಲಿಯನ್ನು ಕೊಡಬೇಕೆಂದು ಹೇಳಿದರು. ಸಭೆಯು ಶ್ರೀ ದಾಸಪ್ಪನವರ ಸೂಚನೆಯನ್ನು ಸರ್ವಾನುಮತದಿಂದ ಒಪ್ಪಿತು. ವಂದನಾ ರ್ಪಣೆಯಾದ ನಂತರ ಸಭೆಯು ಮುಕ್ತಾಯವಾಯಿತು.

ಸ್ಪೇನ್ ಸಮಸ್ಯೆ

ಬ್ರಿಟನ್, ಅಮೆರಿಕಾಗಳೊಡನೆ ಮತ್ತೆ ಜಾಗತಿಕ ಯ ಪ್ರಾಧಾನ್ಯತೆ ವಹಿಸಿರುವ ರಷ್ಯನೊಡನೆ ಸ್ಪೇನ್ ಫ್ರಾನ್ಸಿನ ಗಡಿ ಮುಚ್ಚಿರುವುದ ರಿಂದ ಉಂಟಾಗಿರುವ ಪರಿಸ್ಥಿತಿಯನ್ನು ಸ್ಪೇನ್ ಮಂತ್ರಿಮಂಡಲ ಪರೀಕ್ಷಿಸಿ, ಸ್ಪೇನಿನ ಆಂತರಿಕ ವ್ಯವಹಾರದಲ್ಲಿ ಬ್ರಿಟನ್ ಅಮೆರಿಕಾ ಅಮೆರಿಕಾದವರಾಗಲಿ ಕೈಹಾಕ ಕೂಡದೆಂದು ಎಚ್ಚರಿಕೆ ಇತ್ತಿದೆ.

ಮಂಚೂರಿಯಾದಿಂದ ರಷ್ಯ ಸೇನೆ ವಾಪಸ್ಸು

ಮಂಚೂರಿಯಾದಿಂದ ರಷ್ಯ ಸೇನೆಗಳೆಲ್ಲಾ ವಾಪಸಾಗಲು ಮಾಸ್ಕೋ ಆಜ್ಞೆ ಇತ್ತಿರುವುದಾಗಿ ತಿಳಿದು ಬಂದಿದೆ. ಅಮೆರಿಕಾ ಈ ಬಗ್ಗೆ ರಷ್ಯಕ್ಕೆ ಚೀನಾ ಸೈನ್ಯವನ್ನು ವಾಪಸ್ ಕರೆಸಿಕೊಳ್ಳದಿದ್ದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಬಿಕ್ಕಟ್ಟುಂಟಾಗಬಹುದೆಂದು ಎಚ್ಚರಿಸಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಯಿತೆಂದು ರಷ್ಯ ಚೀನಾಗೆ ತಿಳಿಸಿರುವುದೆಂದು ಊಹಿಸಲಾಗಿದೆ.

...ಯ ಆಶೀರ್ವಾದ ಏರ್ಪಡಿಸಲ್ಪಟ್ಟಿದೆ. ದಾ ...ಸ್ವಾತಂತ್ರ್ಯ ಸಂಗ್ರಾಮ ಸಮಿತಿಯು ನಡೆಸುತ್ತಿರುವ ಈ ಸಮಾರಂಭವನ್ನು ಮೈ॥ ಕಾಂ ... ಜಿಲ್ಲಾ ಚಳವಳಿಗಾರರ ಶ್ರೀ ಎಂ. ರಾಮಯ್ಯನವರು ನೆರವೇರಿಸುತ್ತಾರೆ.

ಇಂಡೊನೇಷಿಯದ ಪರಿಸ್ಥಿತಿ

ಡಚ್ ಸೈನ್ಯದ ಪ್ರವಾಹವು ಇಂಡೊನೇಷಿಯಾ ಕಡೆಗೆ ಹೋಗುತ್ತಿದೆ ಹರಿಯುತ್ತಿದೆ. ಜಾವಾ ಮುಂತಾದೆಡೆ ಇರುವ ಬ್ರಿ॥ ಮತ್ತು ಭಾರತೀಯ ಸೈನ್ಯಗಳೆಲ್ಲಾ ಆ ಪ್ರದೇಶದಿಂದ ವಾಪಸಾಗುವುವೆಂದೂ, ಆ ಸ್ಥಳದಲ್ಲಿ ಡಚ್ ಸೈನ್ಯವನ್ನಿಡಲಾಗುವುದೆಂದೂ ಪ್ರಕಟಿಸಲಾಗಿದೆ. ಪರಿಸ್ಥಿತಿ ಬಿಗಡಾಯಿಸುತ್ತಿರುವುದರಿಂದ ಜಾವಾದಲ್ಲಿರುವ ಬಿಳಿಯರೆಲ್ಲಾ ತಮ್ಮ ದೇಶಕ್ಕೆ ತೆರಳಲು ಸಿದ್ಧರಾಗುತ್ತಿದ್ದಾರೆ. ಇಂಡೊನೇಷಿಯಾದ ಪ್ರಧಾನಿ ಡಚ್ ನೀತಿಯನ್ನು ಪ್ರತಿಭಟಿಸಿ ರಾಜೀನಾಮೆ ಕೊಡಬಹುದೆಂದು ಹೇಳಲಾಗಿದೆ.

ಅಮೆರಿಕಾಕ್ಕೆ ಚರ್ಚಿಲರ ಎಚ್ಚರಿಕೆ

ಭಾರತದ ವಿಚಾರದಲ್ಲಿ ಅಮೆರಿಕಾ ಪ್ರವೇಶಿಸಕೂಡದೆಂದು ಚರ್ಚಿಲರು ಟ್ರೂಮನ್ನರನ್ನು ಎಚ್ಚರಿಸಿದ್ದಾರೆಂದು ಗೊತ್ತಾಗಿದೆ. ಭಾರತದ ಸದ್ಯದ ಸ್ಥಿತಿಯನ್ನು ಬಿಡಿಸಲು ಬ್ರಿಟನ್ ಸಮರ್ಥವಾಗಿರುವುದೆಂದೂ ಹೀಗೆ ಭಾರತ ಸ್ವಾತಂತ್ರ್ಯ ಪಡೆದ ಮುಹೂರ್ತದಲ್ಲೇ ಹಿಂದೂ ಮುಸ್ಲಿಂ ಅಂತಃಕಲಹದಿಂದ ರಕ್ತದ ಕ್ರಾಂತಿ ಉಂಟಾಗುವುದೆಂದೂ, ಆಗ್ಗೆ ರಷ್ಯ ಸಮಯ ಸಾಧಿಸಿ ಭಾರತವನ್ನು ಆಕ್ರಮಿಸಲು ಪ್ರಯತ್ನಿಸುವುದೆಂದೂ ಚರ್ಚಿಲರು ಹೇಳಿದರೆಂದು ವರದಿಯಾಗಿದೆ.

ಚುನಾವಣೆ ಮುಂದುವರಿಸಬೇಕು

ತಾ॥ ೧೧ ನೇ ಶುಕ್ರವಾರ ನಡೆಯಬೇಕಿದ್ದ ಮೈಸೂರು ನಗರದ ಕಾಂಗ್ರೆಸ್ಸಿನ ಕಾರ್ಯಕಾರಿ ಮತ್ತು ಎಕ್ಸಿಕ್ಯೂಟಿವ್ ಕಮಿಟಿಯ ಚುನಾವಣೆಗಳು ನಡೆಯಲಿಲ್ಲ. ಮೈಸೂರು ಕಾಂಗ್ರೆಸ್ಸಿನ ನಿಯಮಾವಳಿಯು ಅಲ್ಲ, ಉಪಸಮಿತಿಯು ಸಹಾಯದಿಂದ ನಗರದ ಪ್ರಾಥಮಿಕ ಸಮಿತಿಗಳು ರಚಿತವಾಗಿಲ್ಲವಿರುವುದರಿಂದ ಪಾರ್ಟಿ ಸಮಿತಿ ಚುನಾವಣೆಯಲ್ಲಿ ತ ಕರಾರು ಇದ್ದೂ ತೀರ್ಮಾನವಾಗಿಲ್ಲವಾದ್ದರಿಂದ ಮುಂದಿನ ಚುನಾವಣೆಗಳನ್ನು ಮುಂದುವರಿಸಬೇಕೆಂದು ಶ್ರೀಗಳಾದ ಎ. ರಾಮಣ್ಣ, ಎಸ್. ಎಂ. ...., ಹೆಚ್. ಸಿ. ಸುಬ್ರಮಣ್ಯ, ಹಿ. ಕೆ. ಸುಬ್ಬರಾವ್ ಮತ್ತು ಎಸ್. ಶ್ರೀಕಂಠಯ್ಯನವರು ಪ್ರಸ್ತಾಪಿಸಿದ್ದಾರೆ

ಬಿಹಾರ ಮತ್ತು ಒರಿಸ್ಸಾ ಪ್ರಾಂತಗಳ ... ಪ್ರತಿನಿಧಿ ಮತ್ತು ಪ್ರೀ॥ ಸೈನ್ಯಗಳ ಸ್ಥಳಾಂತರ ವಾಪಸ್ ಏರ್ಪಡಿಸಿಕೊಳ್ಳಲು ನಿರ್ಧಾರ ಎದುರಾಗಿರುವುದಾಗಿ ಗೊತ್ತಾಗಿದೆ.

ಪತ್ರಿಕಾ ಕರ್ತರಿಗೆ ಮಾನ ನಷ್ಟದ ನೋಟೀಸು

ಮೈಸೂರು ೧೧

ಮಾರ್ಚಿ ೫ ನೇ ತಾ॥ "ಮೈಸೂರು ಪತ್ರಿಕೆಯಲ್ಲಿ" ರಾಜೀನಾಮೆಯೋ ಗನ್ನೇ? ಎಂಬ ಶಿರೋನಾಮೆಯಲ್ಲಿ ಅಧಿಕ ಪ್ರಸಂಗಿಯೆಂಬ ನಾಮಾಂಕಿತದಲ್ಲಿ ಪ್ರಕಟಿಸಲ್ಪಟ್ಟ ಲೇಖನದ ಬಗ್ಗೆ ರಾಜಧಾನಿಯ ಪ್ರಜಾಸಭಾ ಸದಸ್ಯರಾದ ಶ್ರೀ ಜಿ. ಸಿ. ಸಂಜೀವಯ್ಯನವರು ಸಂಪಾದಕರಾದ ಶ್ರೀ ಪಿ. ನಾರಾಯಣರವರಿಗೆ ಲಾಯರ್ ಮೂಲಕ ನೋಟೀಸ್ ಜಾರಿ ಮಾಡಿಸಿ ಆ ಪ್ರಕಟಣೆಯು ತನಗೆ ಸಂಬಂಧ ಪಟ್ಟಿದೆಂದೂ, ಹಾಗೇನಾದರೂ ಅದು ಅವರಿಗೆ ಸಂಬಂಧಪಡದಿದ್ದರೆ, ಅದರ ಬಗ್ಗೆ ೨೪ ಘಂಟೆ ಒಳಗೆ ಸಮಜಾಯಿಷಿ ಕೊಡದಿದ್ದಲ್ಲಿ ನ್ಯಾಯಸ್ಥಾನದಲ್ಲಿ ಮಾನ ನಷ್ಟ ಮೊಕದ್ದಮೆ ಹೂಡಲಾಗುವುದೆಂದೂ ಸೂಚಿಸಿರುವುದಾಗಿ ತಿಳಿದು ಬಂದಿದೆ.

ಆಚಿನ್‌ಲೆಕ್—ವೈಸರಾಯ್ ಭೇಟಿ

ನಾಳೆಯ ದಿನ ಎರಡೂವರೆ ಘಂಟೆಗೆ ಮಿ॥ ಆಗಾಖಾನರು ದಕ್ಷಿಣ ಆಫ್ರಿಕದ ಭಾರತೀಯರ ಪರಿಸ್ಥಿತಿಯನ್ನು ವಿವರಿಸಲೋಸುಗ ವೈಸರಾಯರನ್ನು ಭೇಟಿ ಮಾಡುವರೆಂದೂ ಈ ಸಂದರ್ಭದಲ್ಲಿ ಒಂದು ಮನವಿಯನ್ನು ಅವರು ವೈಸರಾಯರಿಗೆ ಅರ್ಪಿಸುವರೆಂದೂ ವರದಿಯಾಗಿದೆ

ಕೇಂದ್ರದಲ್ಲಿ ಮಿಶ್ರ ಸರಕಾರ

ಭಾರತಕ್ಕೆ ತೆರಳಲಿರುವ ಮಂತ್ರಿಮಂಡಲದ ನಿಯೋಗದ ಫಲಿತಾಂಶ ದಿಂದ ತಕ್ಷಣದಲ್ಲೇ ಕೇಂದ್ರದಲ್ಲಿ ಪ್ರಮುಖ ಪಂಗಡಗಳ ನಾಯಕರುಗಳನ್ನೊಳಗೊಂಡ ಮಿಶ್ರ ಸರ್ಕಾರವು ಸ್ಥಾಪಿಸಲ್ಪಡಬೇಕಾದ್ದು ಅಗತ್ಯವೆಂದು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆ ಅಗ್ರಲೇಖನದಲ್ಲಿ ಬರೆದಿದೆ.

ಪಂಜಾಬಿನಲ್ಲಿ ಹಿಂದೂ-ಮುಸ್ಲಿಂ ವಿದ್ಯಾರ್ಥಿಗಳ ಘರ್ಷಣೆ

ಪಂಜಾಬಿನಲ್ಲಿ ಲಾಹೋರಿನಲ್ಲಿರುವ ಮಿಶ್ರ ಸಚಿವ ಮಂತ್ರಿಮಂಡಲದ ವಿರೋಧವಾಗಿ ಒಂದು ಕೃತಕ ಸ್ವಾಗತ ಯಾತ್ರೆಯ ಪ್ರದರ್ಶನ ನಡೆಸಲು ಮುಸ್ಲಿಂ ಲೀಗ್ ವಿದ್ಯಾರ್ಥಿಗಳು ಪ್ರಯತ್ನಿಸಿದಾಗ, ಸನಾತನ ಧರ್ಮ ಕಾಲೇಜಿನ ಬಳಿ ಹಿಂದೂ ವಿದ್ಯಾರ್ಥಿಗಳು ಪ್ರದರ್ಶಕರಿಗೂ ಹೊಡೆದಾಟ ನಡೆದು ೧೧ ವಿದ್ಯಾರ್ಥಿಗಳಿಗೆ ಪೆಟ್ಟು ಬಿದ್ದಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೋಲೀಸರು ಗುಂಡು ಹಾರಿಸಿದರೆಂದು ವರದಿಯಾಗಿದೆ

ಪ್ರತಿಭಟನಾ ಉಪವಾಸ ವ್ರತ

ನೆಲ್ಲೂರಿನ ಬಳಿ ಇರುವ ಗುಲಾಬ್ ಪೇಟೆಯ ದೇವಾಲಯವನ್ನು ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶಕೊಡದಿರುವುದನ್ನು ಹಿಂದೆ ಶ್ರೀ ಪೊಟ್ಟಿ ಶ್ರೀರಾಮುಲು ಉಪವಾಸ ಪ್ರತಿಭಟನಾ ವ್ರತವನ್ನು ಮಾ॥ ೩ ರಿಂದ ಆರಂಭಿಸಿದ್ದಾರೆ. ಅವರು ಮಾನಸ ಪ್ರಾರ್ಥನೆಯನ್ನು ಆಚರಿಸುತ್ತಿದ್ದಾರೆ. ಇವರ ಈ ಪ್ರಶ್ನೆಗೆ ಮಹಾತ್ಮಾ ಗಾಂಧೀಜಿಯವರು ಅಭಿಪ್ರಾಯ ಕೊಟ್ಟಿದ್ದಾರೆ.

———

ಹಿಂದೂಸ್ತಾನ್ ಸೋಷಲಿಸ್ಟ್ ಅಧಿಕಾರಿಗಳು ಶ್ರೀ ಡಿ. ಟಿ. ತಿಮ್ಮಯ್ಯನವರನ್ನು ಎಕ್ಸ್ ... ಕೇಂದ್ರ ಕಛೇರಿಯ ... ನಗರದಲ್ಲಿ ಅವರ ಸ್ಥಾನಕ್ಕೆ ... ನೇಮಿಸಿದ್ದಾರೆ ... ಅವರನ್ನು ... ಮಾಡಿದ್ದಾರೆ [illegible]

ಸಾಧ್ವಿ

ತಾ॥ ೧೧-೩-೪೬ ಸೋಮವಾರ

ಪಾಕೀಸ್ಥಾನಕ್ಕೆ ನೆಲೆ ಎಲ್ಲಿ ?

ಸಿಂಧ್ ಪ್ರಾಂತ್ಯದ ಪ್ರಧಾನಿಗಳಾದ ಸರ್ ಗುಲಾಮ್ ಹುಸೇನ್ ಹಿದಯತುಲ್ಲಾರವರು ತಮ್ಮ ಪ್ರಾಂತ್ಯದಲ್ಲಿ ಹೊಸ ಚುನಾವಣೆ ನಡೆಯಬೇಕೆಂದು ಸೂಚಿಸಿದ್ದಾರೆ. ಸ್ಥಿರವಾದ ಮಂತ್ರಿಮಂಡಲದ ರಚನೆಗೆ ಅಲ್ಲಿ ಈಗ ಅವಕಾಶವಿಲ್ಲವೆಂದು ಅವರು ಹೇಳಿದ್ದಾರೆ ಮತ್ತು ಶಾಸನ ಸಭೆಯ ಸದಸ್ಯರುಗಳು ಒಂದು ಪಕ್ಷವನ್ನು ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರ್ಪಡೆ [illegible] ಹೋಗುತ್ತಿರುವರೆಂದೂ ತಿಳಿಸಿದ್ದಾರೆ. ಅಂತಹ ಸ್ಥಿತಿಯಲ್ಲಿ ಯಾವ ಮಂತ್ರಿಯೂ ಧೈರ್ಯದಿಂದ ಕೆಲಸ ಮಾಡಲು ಸಾಧ್ಯವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಪ್ರಧಾನ ಮಂತ್ರಿಗಳೇ ಬೇರೆ [illegible] ಒಪ್ಪಿಕೊಂಡಿರುವುದರಿಂದ ಈಗಿನ ಮಂತ್ರಿಮಂಡಲದ [illegible] ಎಷ್ಟು [illegible] ವೇದ್ಯವಾಗುವುದು.

ಸಿಂಧ್ ಪ್ರಾಂತ್ಯದಲ್ಲಿ ಈಗ ಇರುವುದು ಮುಸ್ಲಿಂ ಲೀಗ್ ಮಂತ್ರಿಮಂಡಲ. ಸಭೆಯಲ್ಲಿ [illegible] ಲೀಗಿನ ಪರವಾಗಿ ಮಂತ್ರಿಮಂಡಲವಿರುವುದು ಇಲ್ಲಿ ಮಾತ್ರ. ಕಾಂಗ್ರೆಸ್ ಮತ್ತು ಇತರ ಪಂಗಡಗಳ [illegible] ಸಂಖ್ಯೆಯು ಲೀಗಿನ ಸಂಖ್ಯೆಗಿಂತಲೂ ಹೆಚ್ಚು [illegible] ಆದರೆ ಅಲ್ಲಿನ ಗವರ್ನರು ಮೊದಲು [illegible] ಲೀಗಿಗೆ ಅವಕಾಶ ಕೊಟ್ಟರೆಂದೂ [illegible] ಇದೆ. ಈ ಬಗ್ಗೆ [illegible] ಶಾಸನ ಸಭೆಯಲ್ಲಿ ಬರಲಿರುವ ಅವಿಶ್ವಾಸದ ನಿರ್ಣಯದ ಸಭೆಯು ಸ್ಪಷ್ಟ ಅಭಿಪ್ರಾಯವನ್ನು ಸೂಚಿಸಲಿದೆ. ವಿವಿಧ ಪಂಗಡಗಳ [illegible] ಸದಸ್ಯರು ಬೇರೆ ಪಂಗಡಗಳಿಗೆ ಸೇರಿಕೊಂಡಿರುವುದೂ ಉಂಟು. ಇವುಗಳನ್ನೆಲ್ಲಾ ನೋಡಿಯೇ ಪ್ರಧಾನಿಗಳು [illegible] ಅಭಿಪ್ರಾಯವನ್ನು ಸೂಚಿಸಿದ್ದಾರೆ. ಬೇರೆ ಚುನಾವಣೆಗಳು ನಡೆದರೆ [illegible] ಸದಸ್ಯರನ್ನೇ [illegible] ತಮ್ಮ [illegible] ಬರುವುದೆಂಬ ಆಕಾಂಕ್ಷೆ [illegible]. ಅಂತು ಅಲ್ಲಿನ ಮಂತ್ರಿಮಂಡಲ [illegible] ಪ್ರಧಾನಿಗಳ [illegible] ಬಂದಿರುತ್ತವೆ.

ಪಾಕೀಸ್ಥಾನಕ್ಕೆ ಆಧಾರ ಪ್ರಾಂತಗಳಾದ ಬಂಗಾಳ, ಪಂಜಾಬ್, ಸರಹದ್ದು ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ [illegible] [illegible] ಕಾಂಗ್ರೆಸ್ [illegible] ಮಂತ್ರಿಮಂಡಲ [illegible]

[illegible]

[illegible] ಪಾಕೀಸ್ಥಾನಕ್ಕೆ ನೆಲೆಯೇ ಇಲ್ಲವೆಂದು [illegible] ಹೇಳಬಹುದು.

[illegible] ಮತ್ತು [illegible] ಪಂಜಾಬ್, ಗಳ [illegible] ಮಂತ್ರಿಮಂಡಲ [illegible] ತಮ್ಮ [illegible] ಪಾಕೀಸ್ಥಾನದ ಪರ [illegible] ಅಭಿಪ್ರಾಯವನ್ನು [illegible] ತಮ್ಮ ಉದ್ದೇಶವೆಂದೂ [illegible]. [illegible] ಎಂದು ಹೇಳ [illegible] ಸತ್ಯ [illegible]. ಪಾಕೀಸ್ಥಾನಕ್ಕೆ [illegible] ಪ್ರಾಂತ್ಯದಲ್ಲಿ [illegible] ಇಲ್ಲ [illegible] ಪಾಕೀಸ್ಥಾನಕ್ಕೆ ನೆಲೆ ಇಲ್ಲ

ವಾರ ಭವಿಷ್ಯ

ಶ್ರೀ

ತಾ ೧೧-೩-೪೬ ರಿಂದ ೧೭-೩-೪೬ ರ ವರೆಗೆ.

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)*

ಮೇಷ— ಆರ್ಥಿಕ ಪ್ರಗತಿ ಅಷ್ಟು ಮೆಚ್ಚಾಗಿರುತ್ತದೆ. ಉದ್ಯೋಗದಲ್ಲಿ ಆನಂದ. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಧನ ಲಾಭ. ಆರೋಗ್ಯ ಚೆನ್ನಾಗಿರುವುದು ಪ್ರವಾಸದಿಂದ ಲಾಭ ತಾ॥ ೧೧-೧೪-೧೭ ಉತ್ತಮ.

ವೃಷಭ— ಶತ್ರುಗಳು ನಿರ್ನಾಮವಾಗಿ ಹೋಗುವುವು. ನಿರುದ್ಯೋಗಸ್ಥರಿಗೆ ಕೆಲಸ ಲಭಿಸುತ್ತದೆ. ಕೋರ್ಟು ಮೊಕದ್ದಮೆ ಅನುಕೂಲವಾಗಿ ತೀರ್ಮಾನ. ಸಂತೋಷ ಕೂಟ. ವ್ಯಾಪಾರದಲ್ಲಿ ಪ್ರಗತಿ. ಪ್ರವಾಸದಿಂದ ಆರೋಗ್ಯ ತಾ॥ ೧೧, ೧೫ ಇಷ್ಟ ಸಿದ್ಧಿ.

ಮಿಥುನ— ವೃಥಾ ಧನವ್ಯಯ. ಕೆಲಸ ಕಾರ್ಯಗಳಲ್ಲಿ ಅಪಜಯ. ಗೃಹದಲ್ಲಿ ಇಲ್ಲದ ಮನಸ್ತಾಪ. ಪ್ರವಾಸಾದಿಗಳಲ್ಲಿ ಅಪಘಾತ ತಾ॥ ೧೩, ೧೭ ಎಚ್ಚರದಿಂದಿ

ಕಟಕ— ಆರ್ಥಿಕ ದೃಷ್ಟಿ ಶೂನ್ಯ. ಕೆಲಸ ಮಾಡಿದರೂ ಪ್ರಯೋಜನವಿಲ್ಲ. ವೃಥಾ ದುಡಿತ. ನಿರಾಶೆ. ವ್ಯಾಪಾರಸ್ಥರಲ್ಲಿ ಪೈಪೋಟಿಯಿಂದ ಧನನಷ್ಟ. ತಾ॥ ೧೨, ೧೭ ಧನ ಹಾನಿ. ಕಾರ್ಯ ಭಂಗ.

ಸಿಂಹ— ವ್ಯಾಜ್ಯಗಳಲ್ಲಿ ತಲೆ ಹಾಕಿ ಅವಮಾನಿತರಾಗುವಿರಿ. ವ್ಯಾಪಾರ-ಕೃಷಿಗಳಲ್ಲಿ ನಷ್ಟ. ಆರೋಗ್ಯಕ್ಕೆ ಸಾಧಾರಣ. ಪ್ರವಾಸಕ್ಕೆ ಅನಾನುಕೂಲ

ಕನ್ಯಾ— ಯಾವುದರಲ್ಲೂ ಕೊರತೆ ಇರದು. ಉತ್ತಮ ಧನ ಸಂಪಾದನೆಯಾಗುತ್ತದೆ. ಪರೀಕ್ಷೆಗಳಲ್ಲಿ ಯಶಸ್ಸು. ಗೃಹದಲ್ಲಿ ಸಮಸ್ತೋಲಭ್ಯ. ಪ್ರವಾಸದಲ್ಲಿ ಆಸಕ್ತಿ. ತಾ॥ ೧೩-೧೫ ಕಾರ್ಯ ಜಯ.

ತುಲಾ— ಉತ್ತಮ ಧನ ಲಾಭ. ಪರದೇಶಗಳಿಂದ ಪತ್ರಗಳು ಬರುತ್ತವೆ. ಶತ್ರುಗಳು ರಾಜಿ ಸಲ್ಲಾಪ ಮಾಡುವರು. ಪ್ರವಾಸಕ್ಕೆ ಉತ್ತಮ. ತಾ॥ ೧೫ ಆನಂದ

ವೃಶ್ಚಿಕ— ಕೋಪ ಪ್ರಸಂಗಗಳು ಉಂಟು. ಸಂಪಾದನೆಗೆ ವಿಘ್ನಕರವಾದ ಬಿಕ್ಕಟ್ಟು [illegible]. ಅಧಿಕಾರಸ್ಥರಿಂದ ಕಿರುಕುಳ. ಮಿತ್ರವರ್ಗದವರಲ್ಲಿ ಅನುಮಾನ. ಗೃಹದಲ್ಲಿ ರೋಗ ಬಾಧೆ. ಸೂರ್ಯ ಪ್ರಾರ್ಥನೆಯಿಂದ ಶುಭ. ತಾ॥ ೧೪ ಅಶುಭ.

ಧನುಸ್ಸು— ಇಷ್ಟಮಿತ್ರರಲ್ಲಿ ಪ್ರಖ್ಯಾತಿ. ಶ್ರೀಮಂತರ ಸಹವಾಸ ಮಾಡುವಿರಿ. ಶರೀರದಲ್ಲಿ ಲವಲವಿಕೆ. ಪ್ರವಾಸಕ್ಕೆ ಉತ್ತಮ. ತಾ॥ ೧೩-೧೪ ಕಾರ್ಯ ಜಯ, ಧನ ಲಾಭ

ಮಕರ— ಈ ವಾರದಲ್ಲಿ ಉತ್ತಮ ಧನವನ್ನು ಪಡೆಯುವಿರಿ. ನೌಕರಿಯಲ್ಲಿ ಬಡ್ತಿ [illegible]. ಮಾನಸಿಕ ಸ್ಥಿತಿ ಸರಿಹೋಗುತ್ತದೆ. ಪ್ರವಾಸದಿಂದ ಬಂಧುಗಳ ಭೇಟಿ

ಕುಂಭ— ಸಕಲ ಸೌಲಭ್ಯಗಳು ಲಭಿಸುವುವು. ಸ್ವಾಧಿ-ವ್ಯಾಪಾರ-ವ್ಯವಹಾರಗಳಲ್ಲಿ ಉತ್ತಮ ಧನಲಾಭ. ಸ್ನೇಹಿತರ ಭೇಟಿಯಾಗುವುದು. ಆರೋಗ್ಯ ಸುಖಕರ. ತಾ॥ ೧೩-೧೪ ಆನಂದ, ಇಷ್ಟಸಿದ್ಧಿ.

ಮೀನ— ಯೋಚನೆಗಳೆಲ್ಲಾ ವಿಫಲವಾಗುವುವು. ಉದ್ಯೋಗದಲ್ಲಿ ಅಸಂತೃಪ್ತಿ. ಗೃಹದಲ್ಲಿ ಕಲಹ, ಪ್ರವಾಸದಿಂದ ಧನವ್ಯಯ, ತಾ॥ ೧೪-೧೭ ಧನ ನಷ್ಟ.

ಅತಿ ವೃದ್ಧ ಮನುಷ್ಯ

ಪ್ರಪಂಚದಲ್ಲೆಲ್ಲಾ ಅತಿ ವೃದ್ಧನಾದ ೧೭೦ ವಯಸ್ಸಿನ ಷೇಕ್ ಮಹಮದ್ ಸಿಂಗ್ ಎಂಬುವನು ಈಜಿಪ್ಟಿನಲ್ಲಿ ಜೀವಿಸಿರುವನು ಇವನಿಗೆ ೭ ಮಕ್ಕಳಿರುವರು ಮತ್ತು ೭ನೆಯವನು ತನ್ನ ೮೦ ನೇ ಹುಟ್ಟುಹಬ್ಬವನ್ನು ಕೆಲವು ದಿನಗಳ ಕೆಳಗೆ ಮಾಡಿಕೊಂಡನು. ಷೇಕ್‌ಮಹಮದನಿಗೆ ಇಷ್ಟು ವಯಸ್ಸಾದರೂ ಅವನು ಬಹಳ ಬಲಶಾಲಿಯಾಗಿಯೂ ಮತ್ತು ಅವನಿಗೆ ಜ್ಞಾಪಕ ಶಕ್ತಿಯು ಬಹಳ ಚೆನ್ನಾಗಿಯೂ ಇರುವುದು. ಇವನು ತರಕಾರಿ, ಮಾಂಸ ಮತ್ತು ಬ್ರೆಡ್ಡನ್ನು ಆಹಾರವನ್ನಾಗಿ ಉಪಯೋಗಿಸುವುದಲ್ಲದೆ ಕಬ್ಬು ಸಿಗಿಯುವನು. ಇವನು ೧೮೪೦ ರಲ್ಲಿ ಕೈರೋದಲ್ಲಿ ಮೊಹಮದಲಿಯವರ ನಡೆಸಿದ ಕೊಲೆಯನ್ನು ಬಹಳ ಚೆನ್ನಾಗಿ ವರ್ಣಿಸುವನು.

ಕ್ವಿಯಿಬ್ಬಿಷವ ಮ್ಯೂಸಿಯಮ್ಮಿನ ಆರಂಭ ಭಾಷಣ ಮಾಡುತ್ತಾ ಡಾ॥ ಫ್ರಾಂಕೋಡವರು ತಾವು ಶಿರಾಸ್ತ್ರಗಳು ಕೊಟ್ಟ ಎಚ್ಚರಿಕೆಯನ್ನು ಗಮನಿಸುವುದಿಲ್ಲವೆಂದೂ, ರಷ್ಯಾ ಮತ್ತು ಕಮ್ಯೂನಿಸಮ್‌ಗಳನ್ನು ಎದುರಿಸುವುದಾಗಲೂ ಪ್ರಪಂಚದಲ್ಲಿ ನಡೆಯುವುದನ್ನು ಪರಿಶೀಲಿಸುವುದಕ್ಕಿಂತ ಸತ್ಯಕ್ಕಾಗಿ ಹೋರಾಡುವುದು ಒಳ್ಳೆಯದೆಂದೂ ತಿಳಿಸಿರುವರು

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ನೋಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಮಿಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ವಾರ್ಷಿಕೋತ್ಸವ

ರಾಜಧಾನಿಯ ತಮಿಳು [illegible] ವ್ಯಾಪಾರಿಗಳ ಸಂಘದ ಪ್ರಥಮ [illegible]ಕೋತ್ಸವವು ನಿನ್ನೆ ಸಂಜೆ [illegible] ಡೇಶ್ವರಿ ಭವನದಲ್ಲಿ ಶ್ರೀ॥ ಜ [illegible] ಮಿ.ಸ್ ರವರ ಅಧ್ಯಕ್ಷತೆಯಲ್ಲಿ [illegible] ನಡೆಯಿತು. ರುಚಿಕರವಾದ [illegible] ದನಂತರ ಸಂಘದ ಅಧ್ಯಕ್ಷರು [illegible] ಪಣ ಮಾಡಿದರು. ಸಂಘದ [illegible] ಶಿಗಳು ಕಳೆದ ಸಾಲಿನಿಂದ [illegible] ಗೊಂಡಿರುವ ಕಾರ್ಯಕ್ರಮಗಳನ್ನು [illegible] ಸಿ ವರದಿಯನ್ನು ಒಪ್ಪಿಸಿದರು. [illegible] ಮಿ॥ ಅಸಮದ್ ಖಾನರು ಭಾಷಣ [illegible] ಡಿ ಬಟ್ಟೆಯ ಸರಬರಾಜು ಬಹಳ [illegible] ಗಿರುವ ಈ ಕಾಲದಲ್ಲಿ ಈ ಸಂಘವು [illegible] ಸುತ್ತಿರುವ ಉಪಕಾರವನ್ನು [illegible] ಇಂತಹ ಸಂಘಗಳ ಅಭಿವೃದ್ಧಿ [illegible] ರ್ವಜನಿಕರಿಗೆ ಬಹಳ ಉಪಕಾರ [illegible] ಳಿಸಿದರು. ವಂದನಾರ್ಪಣೆಯೊಡನೆ [illegible] ದಂಭ ಮುಕ್ತಾಯಗೊಂಡಿತು.

ನಂಜನಗೂಡು ದೊಡ್ಡ ಜಾ[illegible] ದನಗಳ ಪ್ರದರ್ಶನ

೧೪-೩-೪೬ ರ ಲಾಗಾಯ್ತು ೧೭[illegible] ರವರೆಗೆ ದೊಡ್ಡ ಜಾತ್ರೆ ರಥೋತ್ಸವ[illegible] ರ್ಭದಲ್ಲಿ, ದನಗಳ ಪ್ರದರ್ಶನವ[illegible] ಊರಿನ ಜೋಗಿ ತೋಪಿನಲ್ಲಿ ಏರ್ಪ[illegible]ತ್ತೆ. ನೀರು ನೆರಳಿನ ಸೌಕರ್ಯ[illegible] ಗಿದೆ. ರಾಸುಗಳಿಗೆ ಸುಂಕವಿಲ್ಲ. [illegible] ಹಾಯ ಏರ್ಪಡಿಸಿದೆ. ಉತ್ತಮ [illegible]ಗೆ ಬಹುಮಾನ ಕೊಡಲಾಗುತ್ತೆ.

ಪಿ. ವಿ. ಕೃಷ್ಣ[illegible]
ಪ್ರೆಸಿಡೆಂಟ್,
ಟವರ್ ಮುನಿಸಿಪಲ್ ಕೌನ್[illegible]
ನಂಜನಗೂಡು

ನಿಮ್ಮ ಮೈ ಮೊಕಮಲ್ಲಿನಂ[illegible]
ಹೊಳೆಯಬೇಕೆ ? ನಿಮ್ಮ
ಲಾವಣ್ಯ ಮೂರ್ತಿಗಳಾಗಬೇ[illegible]
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್ !

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮ[illegible]
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟ[illegible]
ಬೆಂಗಳೂರು.

ಸಾಧ್ವಿ
ರಾಜಧಾನಿಯ ದಾಷ್ಟ್ರೀ[illegible]
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ[illegible]

Edited printed and published by K. R. Nagarajan at the Sadhvi Press D. Subbiah Road, Mysore.

ಫೋನ್ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಮಂಗಳವಾರ ೧೨—೩—೪೭ [ಸಂಚಿಕೆ ೧೭೨

ಸಂಧಾನ ವಿಫಲವಾದರೆ ಭಾರತದಲ್ಲಿ ದಂಗೆಯೇ

ಹೊಸ ಹೋಟಲುಗಳ ಆರಂಭ ಆಶ್ಚರ್ಯವಾಗಿದೆ

ಪ್ರಜಾಪ್ರತಿನಿಧಿ ಸಭೆಯ ಮುಸ್ಲಿಂ ಲೀಗ್ ಪಕ್ಷದ ಕಾರ್ಯದರ್ಶಿಗಳಾದ ಮಿ॥ ಮಹಮದ್ ಖಲೀಲುಲ್ಲಾರವರು ಈ ರೀತಿ ಹೇಳಿಕೆ ಇತ್ತು—

'ಅಖಿಲ ಮೈಸೂರು ಸ್ಟೇಟ್ ಮುಸ್ಲಿಂ ಲೀಗ್ ಸದ್ಯದ ಆಹಾರ ಪರಿಸ್ಥಿತಿಯಿಂದ ಹೋಟೆಲ್ ವಗೈರೆ ಹೆಚ್ಚಿಸಬಾರದೆಂದು ಸಾಧ್ಯವಾದರೆ ಇರುವುದನ್ನು ಕಂಟ್ರೋಲ್ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ರಾಜ್ಯ ಮಾಡಿರುತ್ತಾರೆ. ಮೈಸೂರಿನಲ್ಲಿ ಹೊಸ ಹೊಸ ಹೋಟಲುಗಳು ಆರಂಭವಾಗುವುದನ್ನು ನೋಡಿ ನನಗೆ ಆಶ್ಚರ್ಯವೂ ಬೇಸರವೂ ಉಂಟಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಆಶಿಸುತ್ತೇನೆ' ಎಂದು ತಿಳಿಸಿದ್ದಾರೆ.

ಮೂರನೇ ಯುದ್ಧಕ್ಕೆ ಚರ್ಚಿಲರ ಮುನ್ನುಡಿ

ಅಮೇರಿಕಾ, ಬ್ರಿಟನ್ ಮತ್ತು ರಷ್ಯಾಗಳಿಗಿರುವ ಮೈತ್ರೀ ಭಾವವನ್ನು ಮಿ॥ ಚರ್ಚಿಲ್‌ರವರು ಸಾರವಾದ ಪ್ರಸ್ತಾಪದಿಂದ, ಅವರ ಇತ್ತೀಚಿನ ಎರಡು ಭಾಷಣಗಳೇ ಸಾಕ್ಷಿ. [illegible] ರಷ್ಯದ [illegible] ಚರ್ಚಿಲರ [illegible]. ರಷ್ಯದ ಮೇಲೆ ಅಮೇರಿಕಾ ಮತ್ತು ಬ್ರಿಟನನ್ನು ಎತ್ತಿಕಟ್ಟಲು ಚರ್ಚಿಲರು [illegible] ಮುಸಲ್ಟನ್ [illegible] ಚರ್ಚಿಲರ ಬೇಜವಾಬ್ದಾರಿ ಭಾಷಣಗಳು ಕಾರಣವಾಗಿವೆ ಎಂದು ರಷ್ಯ ಹೇಳಿದೆ. ಬ್ರಿಟಿಷ್ [illegible] ಸಾರ್ವಭೌಮತ್ವವನ್ನು ಅಮೇರಿಕಾ ಎತ್ತಿಹಿಡಿಯುತ್ತಿರುವುದನ್ನು ಖಂಡಿಸಿ ರಷ್ಯ ಆದನ್ನೇ [illegible] ಇಂದಿನ ಚರ್ಚಿಲರ [illegible] ನೋಡಿದರೆ ವಿಶ್ವದ ಮೂರನೇ ಸಂಗ್ರಾಮಕ್ಕೆ ಜನರು ಮುನ್ನುಡಿ [illegible] ಎಂದು ರಷ್ಯ ಆಕ್ಷೇಪಿಸಿದೆ.

ತಮ್ಮ ಶುಶ್ರೂಷೆ [illegible] ಬೋನಸ್ [illegible] ವಾಗಿ ನೀಡಿ [illegible] ೧೦೦ ಮಂದಿ [illegible] ದ್ದಾರೆ.

ಬೆಂಗಳೂರು ಚುನಾವಣಾ ಫಲಿತಾಂಶ

ಸ್ವಂತ ವರದಿ] ಬೆಂಗಳೂರು ೧೧

ಬೆಂಗಳೂರು ಪುರಸಭೆಯ ಉಪಚುನಾವಣಾ ಫಲಿತಾಂಶವು ಈ ದಿನ ಬೆಳಿಗ್ಗೆ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ಪ್ರಕಟಪಡಿಸಲಾಗಿದೆ. ಈ ಕೆಳಗೆ ನಮೂದಿಸಲ್ಪಟ್ಟಿರುವವರು ಚುನಾಯಿತರಾಗಿದ್ದಾರೆ.

ಎರಡನೇ ಡಿವಿಜನ್ (೩ ಸ್ಥಾನ)

ಶ್ರೀ ಕೆ. ಆರ್. ರಾಮಸ್ವಾಮಿ (ಕಾಂ) ಶ್ರೀ [illegible] ಮತ್ತು [illegible] (ಸ್ವತಂತ್ರರು)

೭ ನೇ ಡಿವಿಜನ್ (೧ ಸ್ಥಾನ)

ಶ್ರೀ ಜಿ ವಿ ರಾಮಾಚಾರ್ (ಕಾಂ)

೮ ನೇ ಡಿವಿಜನ್ (೨ ಸ್ಥಾನ)

ಶ್ರೀ ದೇವಪ್ಪ ನರಸಿಂಹಮೂರ್ತಿ (ಸ್ವ) ಶ್ರೀ ಕೃಷ್ಣಯ್ಯನವರು (ಸ್ವ)

೯ ನೇ ಡಿವಿಜನ್

ಶ್ರೀ ಎಂ. ಕೃಷ್ಣಸ್ವಾಮಿ ಶೆಟ್ಟಿ (ಸ್ವ)

ಟ್ರಾಲಿ ಬಸ್ ವ್ಯವಸ್ಥೆ

[illegible] ಕಾನ್ಫರೆನ್ಸ್ ಆಶ್ರಯದಲ್ಲಿ ಸ್ಥಾಪಿತವಾಗಿದ್ದ [illegible] ಉಪಸಮಿತಿ [illegible] ಬೆಂಗಳೂರು ನಗರದಲ್ಲಿ ಟ್ರಾಲಿ ಬಸ್ ವ್ಯವಸ್ಥೆ [illegible] ಕೈಗೊಳ್ಳಬೇಕೆಂದು [illegible] 'ಲೆಕ್ಚರ್ ಹಾಲ್' [illegible] ಸರ್ಕಾರಕ್ಕೆ ಕಳುಹಿಸಲ್ಪಟ್ಟಿದೆ.

ನಗರವಾರ್ತೆ

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ [illegible] ಡಾ॥ ಬಿ ಎಂ [illegible] ಬೆಂಗಳೂರು [illegible] ವಿಮಾನ [illegible] ವರ್ಗಾಯಿಸಲಾಗಿದೆ.

ವಿಶ್ವೇಶ್ವರನಗರದ ಶ್ರೀ ಎಂ. [illegible] ಬೆಂಗಳೂರು [illegible] ಡಿ. ವಿ. ಜೆ [illegible] ಗುರುವಾರ [illegible] ಶ್ರೀ [illegible] ನಗರ [illegible]

'[illegible] ನೀಡಿದ [illegible] ಶ್ರೀ [illegible] ಬೇಕೆಂದು [illegible]

ಸಂಧಾನ ವಿಫಲವಾದರೆ ಸೈನಿಕರ ದಂಗೆಯೇ

[illegible] ಆಗಮಿಸುವ ಬ್ರಿಟಿಷ್ ಮಂ[illegible] ನಿಯೋಗವು ಭಾರತ ನಾಯ[illegible] ಸಂಧಾನಕ್ಕೆ ಬರದೆ ವಿಫಲರಾದ[illegible] ಹಿಂಸಾಯುತವಾದ [illegible] ಆಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು ಭಾರತ ಸರ್ಕಾರ [illegible] ತಮ್ಮ ಪತ್ರಿಕಾ ನಿಧಿಗಳಿಗೆ [illegible] ವಿವರಿಸಿದ್ದಾರೆಂ[illegible]. ಅಲ್ಲದೆ ಸೈನಿಕರೂ ಸ[illegible] ಉಪಯೋಗಿಸಿ [illegible] ದಂಗೆ ಏಳುವರೆಂದೂ, ಎಲ್ಲ ಇತರ ಸೈನಿಕರೂ ಹಿಂಬಾ[illegible], ಭಾರತದ ಸರ್ಕಾರ ತನ್ನ [illegible] ವ್ಯಕ್ತಪಡಿಸಿದೆಯೆಂದೂ ತ[illegible] ಬ್ರಿಟಿಷ್ ಅಧಿಕಾರಿ ಯೇ[illegible] ಬ್ರಿಡ್ಜಿನಲ್ಲಿ ಭಾರತದ ವಿದ್ಯಾ[illegible] ಏರ್ಪಡಿಸಿದ್ದ ಕೂಟದಲ್ಲಿ ಡಾ॥ [illegible] ಹೊರಗೆಡಹಿದರು.

[illegible]ಯವರ ಉಪವಾಸ ನಿಂತಿತು

[illegible] ಪ್ರಾಂತ್ಯ ಕಾಂಗ್ರೆಸ್ ಪ್ರಮು[illegible] ಶ್ರೀ [illegible]ಯವರು ಶಾಸನ ಸಭಾ [illegible] ಉಮೇದವಾರರನ್ನು [illegible] ಆರಿಸಿದ ರೀತಿ ನೀತಿಯ[illegible] ಪ್ರತಿಭಟಿಸಿ ಮಾಡಿದ್ದ ಉಪವಾಸವ[illegible] ನಿಲ್ಲಿಸಿದರು. ಇವರು ೨೧ ದಿನ [illegible] ಮಾಡಿದರು. [illegible] ಇಳಿದುಹೋಗಿದ್ದಾರೆ. ಅವ[illegible] ದಿನ ಬೊಂಬಾಯಿ ನಲ್ಲಿ ಸರ್ದಾರ್ [illegible] ಭೇಟಿ ಮಾಡಲಿದ್ದಾರೆ.

[illegible]ಮೂರ್ತಿಗಳ ಸಭೆ

[illegible] ತಮ್ಮ ಸ್ನೇಹವನ್ನು ಬ್ರಿಟನ್ [illegible] ಸಭೆ ನಡೆಯ[illegible] ಅಭಿಪ್ರಾಯ [illegible]

ಹಿಂದೂ ಧರ್ಮ

[illegible] ತನ್ನ ಧರ್ಮದ [illegible] ಇದನ್ನು ನಮ್ಮ ಜನ [illegible] ಪರಿಚಯ ಹೊಂದಿದರೆ [illegible] ಸಾರ್ಥಕವಾಯಿತೆಂಬ [illegible] ಮೈಸೂರು ಸಂಸ್ಥಾನದ [illegible] ಈ ಪುಸ್ತಕ ಪ್ರಕಟಿಸಿದ್ದಾರೆ. ಪ್ರತಿಯೊಬ್ಬ[illegible] ಬೆಲೆ ೦-೪-೦ ಆಣೆ ಮಾತ್ರ.

[illegible] ಚುನಾವಣೆಗಳು

[illegible] ನೇ ಶುಕ್ರವಾರ [illegible] ಕಾಂಗ್ರೆಸ್ [illegible] ಕಾಂಗ್ರೆಸ್ ನಗರ [illegible] ಸಮಿತಿಗೂ ಮತ್ತು [illegible] ಸಮಿತಿಗೂ [illegible] ಚುನಾವಣೆ [illegible] ಶ್ರೀ [illegible] ಸೋಲಿಸಿದ್ದಾರೆ

ಪಾಟಿಯಾಲಾದಲ್ಲಿ ದಸ್ತಗಿರಿ

ತಮ್ಮ ಪ್ರಾಂತ್ಯದ ಸಂಸ್ಥಾನ ಪ್ರಜಾಮಂಡಲದ ಸಮ್ಮೇಳನವನ್ನು ನಡೆಸಲು ಪ್ರಯತ್ನಿಸಿದರೆಂದು ಪಾಟಿಯಾಲಾ ಪ್ರಜಾಮಂಡಲದ ೫೦ ಮಂದಿ ಪ್ರಮುಖರ ದಸ್ತಗಿರಿ ಆಗಿರುವುದಾಗಿ ವಾರ್ತೆ ಬಂದಿದೆ.

ಪರ್ಷಿಯಾ-ರಷ್ಯಾ ಸಂಧಾನ

[illegible] ಪರ್ಷಿಯಾಕ್ಕೂ ರಷ್ಯಕ್ಕೂ ನಡೆಯುತ್ತಿದ್ದ ಸಂಧಾನ ವಿಫಲವಾಗಿವೆಯೆಂದು ಹೇಳಲಾಗಿದೆ. ರಷ್ಯ [illegible] ಬಿಟ್ಟುಕೊಡಬೇಕೆಂದು ಬಯಸಿರುವುದೇ ಈ [illegible] ಕಾರಣವಂತೆ.

ಪಂಜಾಬಿನಲ್ಲಿ ಮಂತ್ರಿಮಂಡಲ

ಸರ್ ಸಿಕಂದರ್ [illegible]ರವರು ಮಂತ್ರಿಮಂಡಲ ರಚಿಸಿದ್ದಾರೆ. ಅದರಲ್ಲಿ ಸರ್ದಾರ್ ಬಲದೇವಸಿಂಗ್; ಸರ್ ಮಹಮ್ಮದ್ [illegible] ಮತ್ತು [illegible] ಇದ್ದಾರೆ.

ಕೈರೋನಗರದಲ್ಲಿ ಬಾಂಬುಗಳು ಚೆಲ್ಲುವಿಕೆ

ಕೈರೋ ನಗರದ [illegible] ಬಾಂಬು ಸಿಡಿದು [illegible] ಪೊಲೀಸರೂ ಸುಮಾರು ೩೦ ಸಿವಿಲ್ ಮತ್ತು ಬ್ರಿಟಿಷ್ ಸಿಪಾಯಿಗಳಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ. [illegible] ಆದರೆ ಈಜಿಪ್ಷಿಯನ್ ಪತ್ರ ಪ್ರದರ್ಶಿತವಾಗಿತ್ತೆಂದೂ, ಈ ಘಟನೆಗಳೆಲ್ಲಾ ಬ್ರಿಟಿಷ್ ವಿರೋಧದ ಸಂಕೇತವೆಂದೂ ಹೇಳಲಾಗಿದೆ.

ರಾಜ್ಯಸಭೆಯಲ್ಲಿ ಸರ್ಕಾರಕ್ಕೆ ಮತ್ತೆ ಸೋಲು

[illegible] ಹಿಂದ್ ಫೌಜಿನ [illegible] ಮತ್ತು ಕೇಂದ್ರ ಸರ್ಕಾರದ ನೌಕರರಿಗೆ [illegible] ಯೋಗಗಳನ್ನು [illegible] ವಿಚಾರದಲ್ಲಿ [illegible] ಸೂಚನೆಗಳು [illegible] ಕೇಂದ್ರ ಸರ್ಕಾರಕ್ಕೆ ಮತ್ತೆ ಸೋಲು ಉಂಟಾಯಿತು.

ಯುದ್ಧಕ್ಕೆ ಫ್ರಾಂಕೊ ಸಿದ್ಧತೆ

ಸ್ಪೇನಿನ ಸರ್ವಾಧಿಕಾರಿಯಾದ ಜನರಲ್ ಫ್ರಾಂಕೊ ಸ್ಪೇನ್ ಫ್ರಾನ್ಸಿನ ಯುದ್ಧ [illegible] ಕೊಂಡು [illegible] ಪ್ರಕಟಿಸಿದೆ. [illegible] ಇದರಿಂದ [illegible]

ಭಾರತದಲ್ಲಿ ಇಟಾಲಿಯನ್ನರು

ಭಾರತದಲ್ಲಿ [illegible] ಇಟಲಿಯವರಿದ್ದಾರೆಂದೂ ಅವರನ್ನು [illegible] ಇರಲಾಗಿದೆಯೆಂದೂ [illegible] ಬ್ರಿಟಿಷ್ ಸರ್ಕಾರ [illegible] ಕೇಂದ್ರ [illegible] ಪ್ರಕಟಿಸಿದೆ. [illegible]

ಸಾಧ್ವಿ

ತಾ॥ ೧೩-೩-೪೬ ಮಂಗಳವಾರ

ಸಂತೋಷ ಕೂಟಗಳಿಗೆ ಮಿತಿ

ಆಹಾರದ ಅಭಾವವು ವಿಪರೀತವಾಗಿರುವ ಈ ಸಮಯದಲ್ಲಿ ಭೋಜನ ಪದಾರ್ಥಗಳ ಉಪಯೋಗವನ್ನು ಮಿತಿಯಲ್ಲಿಡಲು ನೂರೆಂಟು ನಿರ್ಬಂಧಗಳನ್ನು ಮಾಡಲಾಗುತ್ತಿದೆಯಷ್ಟೆ. ಸಂತೋಷ ಕೂಟಗಳಲ್ಲಿ ಆಗುವ ಆಹಾರದ ವೆಚ್ಚದ ಬಗ್ಗೆಯೂ ಒಂದು ಮಿತಿಯನ್ನು ಇಡುವುದು ಅಗತ್ಯವಾಗಿದೆ. ಹತಿಹಾಸದಲ್ಲಿಯೇ ಕಂಡುಕೇಳರಿಯದ ಈ ಘೋರ ಕ್ಷಾಮದ ಸ್ಥಿತಿಯಲ್ಲಿ ಒಂದು ದೃಷ್ಟಿಯಲ್ಲಿ ನೋಡಿದರೆ, ಸಂತೋಷ ಸಮಾರಂಭಗಳಿಗೆ ಅವಕಾಶವೇ ಇಲ್ಲ. ಮಳೆಯು ತಪ್ಪಿ, ಬೆಳೆಯು ಕೆಟ್ಟು, ದೈತ್ಯರು ಕಂಗೆಟ್ಟು, ಜನರೆಲ್ಲರೂ ಹಾಹಾಕಾರ ಪಡುತ್ತಿರುವಾಗ ಸಂತೋಷಕ್ಕೆ ಸಮಯವೆಲ್ಲಿ? ಇಂತಹ ಕಾಲದಲ್ಲಿ ಮದುವೆ ಮುಂಜಿಗಳನ್ನು ಸಹ ನಿಲ್ಲಿಸಬಿಡುವುದೇ ಸೂಕ್ತವೆಂದು ಸಹ ನಮ್ಮ ನಗರದ ಪ್ರಧಾನ ಕ್ಷೇಮ ಅಧಿಕಾರಿಗಳು ಸಲಹೆ ಇತ್ತಿದ್ದರು. ಆದರೆ ಸಮಾಜವು ಇನ್ನೂ ಅಷ್ಟು ದೂರ ಮುಂದೆ ಬಂದಿಲ್ಲ. ಆದರೂ ಈ ಸಮಾರಂಭಗಳಲ್ಲಿ ಮಿತವ್ಯಯವನ್ನು ಕಟ್ಟುನಿಟ್ಟಾಗಿ ಆಚರಿಸಲು ಯಾರಿಗೂ ಅಡ್ಡಿಯಿಲ್ಲ.

ಮಿತವ್ಯಯವು ಈ ಸಮಯದಲ್ಲಿ ಒಂದು ಅಭಾವ ವೈರಾಗ್ಯವಾಗಿ ಕಾಣಬಹುದು. ಆದರೂ ಸಕಲ ಸಂಗಡಿಗಳಿಗೂ ಇದು ಅಪೇಕ್ಷಣೀಯವಾಗಿಯೇ ಇದೆ. ಹಿಂದಿನಂತೆ ಆಡಂಬರಗಳಲ್ಲಿ ತೊಡಗಲು ಈಗ ಯಾರಿಗೂ ಅವಕಾಶವೂ ಇಲ್ಲ, ಅಪೇಕ್ಷೆಯೂ ಇಲ್ಲ. ಮದುವೆ ಮುಂಜಿಗಳನ್ನು ಅತ್ಯಂತ ಸರಳವಾದ ರೀತಿಯಲ್ಲಿ ನಾಗಿಸಲು ಸಕಲರೂ ಬಯಸುತ್ತಾರೆ. ಇದಕ್ಕೆ ಕಾನೂನಿನ ನಿರ್ಬಂಧವು ಬಂದರೂ ಅದನ್ನು ಯಾರೂ ಖಂಡಿಸುವುದಿಲ್ಲ. ಆದುದರಿಂದ ಮದುವೆ, ಮುಂಜಿ ಮತ್ತು ಇತರ ಸಂತೋಷ ಸಮಾರಂಭಗಳಲ್ಲಿ ಭಾಗವಹಿಸುವವರ ಸಂಖ್ಯೆ, ಉಪಯೋಗಿಸುವ ಆಹಾರ ಪದಾರ್ಥಗಳ ಬಗ್ಗೆ ಒಂದು ಮಿತಿಯನ್ನು ಗೊತ್ತುಮಾಡುವುದು ಯುಕ್ತವೇ. ಆದರೆ ಇವುಗಳಲ್ಲಿ ನಿಜವಾಗಿ ಭಾಗವಹಿಸುವ ಬಂಧು ವರ್ಗದವರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಅವಶ್ಯಕ.

ಹಲವು ಧರ್ಮ ಕಾರ್ಯಗಳ ಸಂದರ್ಭಗಳಲ್ಲಿ ಅನ್ನ ದಾನಕ್ಕೆ ನಡೆಯುವ ಪದ್ಧತಿಯು ಅನೂಚಾನವಾಗಿ ಬಂದಿರುತ್ತದೆ. ಇವುಗಳಿಗಾಗಿ ಸರ್ಕಾರವು ವಿಶೇಷ ಸೌಲಭ್ಯಗಳನ್ನು ನೀಡಿರುತ್ತಾರೆ. ಇಂತಹ ಧರ್ಮ ಕಾರ್ಯಗಳಿಗೆ ಅಡ್ಡಿಯಾಗದಂತೆಯೂ ನೋಡಿಕೊಳ್ಳುವುದು ಅಗತ್ಯ.

ಕೇವಲ ಮಿತಿ ಹಾಕುವುದಕ್ಕಾಗಿ ಗೊತ್ತುಗೊಳಿಸಿದ ಆಹಾರ ಪದಾರ್ಥಗಳನ್ನು ಹಂಚುವ ಕೂಟಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ... ನಿರ್ಬಂಧವು ಸಾರ್ವಜನಿಕರ ಸ್ವಾಗತವನ್ನು ಪಡೆಯುತ್ತದೆ

Edited, printed and published by A. R. Ponganjan at the Sadhvi Press D. Subbiah Road, Mysore

“ಅಸಹಕಾರವೋ? ಅವಿಧೇಯತೆಯೋ?”

೧೦ ನೇ ತಾ॥ ಭಾನುವಾರದ ತಮ್ಮ ದಿನ ಪತ್ರಿಕೆಯಲ್ಲಿ ಬರೆದಿರುವ ಸಂಪಾದಕೀಯ ಲೇಖನ ಓದಿದೆ. ಆ ಸಂಪಾದಕೀಯದ ವಸ್ತುವೆಲ್ಲವೂ “ಭಿನ್ನಾಭಿಪ್ರಾಯಗಳ ಮೂಲ ಕಾರಣವು ನಿವೃತ್ತಿಯಾದರೂ ಅದರ ಶಾಖೋಪಶಾಖೆಗಳು ಇನ್ನೂ ತಮ್ಮ ಪ್ರಭಾವವನ್ನು ಬೀರುತ್ತಲೇ ಇರುವಂತಿದೆ” ಎಂಬ ತಪ್ಪು ಅಭಿಪ್ರಾಯದ ಮೇಲೆಯೇ ಅವಲಂಬಿಸಿದೆ.

ಭಿನ್ನಾಭಿಪ್ರಾಯಗಳ ಮೂಲ ಕಾರಣವೇ ಭಾಷ್ಯಂರವರನ್ನು ಕಾರ್ಯಕಾರಿ ಸಮಿತಿಗೆ ಪುನಃ ಬರಮಾಡಿಕೊಂಡದ್ದರಿಂದ ನಿವೃತ್ತಿಯಾಯಿತು- ಎಂಬುದು ಸಂಪಾದಕೀಯದ ವ್ಯಾಖ್ಯಾನವಾದರೆ ಅದು ತಪ್ಪು ಅಭಿಪ್ರಾಯ ಎಂದು ಹೇಳದೆ ವಿಧಿಯಿಲ್ಲ. ಇದು ಸರಿಯಾದ ಕಾರಣವಾಗಿದ್ದರೆ ಶಿವಮೊಗ್ಗ ಯ ಎ.ಎಂ.ಸಿ.ಸಿ ಸಭೆಯಾದ ಮೇಲೆ, ಕಾಂಗ್ರೆಸ್ ಅಧ್ಯಕ್ಷರು ಮೊನ್ನೆ ಬೆಂಗಳೂರಿನ ಕಾಂಗ್ರೆಸ್ ಕೆಲಸಗಾರರನ್ನು ಕಲೆಹಾಕಿ ಒಲಿಸಿಕೊಳ್ಳಲು ಮಾಡಿದ ಪ್ರಯತ್ನ ವಿಫಲವಾದುದು ಏಕೆ? ಕಾಂಗ್ರೆಸ್ ಕೆಲಸಗಾರರು ತಮ್ಮ ತೀರ್ಮಾನ ಬದಲಿಸಲು ಸಾಧ್ಯವಿಲ್ಲವೆಂದು ಹೇಳಬೇಕಾದರೂ ಅವರಿಗೆ ಕಾರಣವಾದರೂ ಏನಿತ್ತು? ಕೆಲಸಗಾರರ ವಾದವನ್ನೂ ಪೂರ್ಣವಾಗಿ ತಿಳಿದುಕೊಳ್ಳದೆ ಇಂತಹ ದುಬಾರಿ ಸಂಪಾದಕೀಯ ಬರೆಯಲು ತೊಡಗುವುದು ಸಾಧುವಲ್ಲ. ಅದರಲ್ಲೂ ಆತ್ಮ ಸಾಕ್ಷಿಗೆ ವಿರುದ್ಧವಾಗಿ ನಡೆಯಲು ಬಯಸದ ಬೆಂಗಳೂರಿನ ಕೆಲಸಗಾರರನ್ನು ಅವಿಧೇಯರು ಎಂದು ಸಂಬೋಧಿಸಿರುವುದನ್ನಂತೂ ಮೈಸೂರಿನ ಕಾಂಗ್ರೆಸ್ ಕೆಲಸಗಾರರಲ್ಲೊಬ್ಬನಾದ ನಾನು ಖಂಡಿಸದೆ ವಿಧಿ ಇಲ್ಲ.

ಬಸವನಗುಡಿ ಡಿವಿಜನ್ನಿನ ಚುನಾವಣೆಯ ವಿಷಯ ತೆಗೆದುಕೊಳ್ಳೋಣ. ಅಲ್ಲಿಗೆ ಕಾಂಗ್ರೆಸ್ ಪರ ನಿಲ್ಲಿಸಿದ್ದ ಇಬ್ಬರು ಸದಸ್ಯರ ಪೈಕಿ ಒಬ್ಬರು (ಮಹಿಳೆ ಆಗಿರು) ತಮ್ಮ ಉಮೇದುವಾರಿಕೆ ಹಠಾತ್ತನೆ ಹಿಂದಕ್ಕೆ ತೆಗೆದುಕೊಂಡರು. ಇವರ ವಿಷಯ ನಮಗೆ ಬೇಕಿಲ್ಲ. ಮತ್ತೊಬ್ಬರು ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎದುರು ನಿಂತು ಸೋತವರು. ಅಂಥವರು ಈ ಸಾರಿ ಕಾಂಗ್ರೆಸ್ ಪರವಾಗಿ ಅರ್ಜಿ ಸಲ್ಲಿಸಿದವರು. ಕಾಂಗ್ರೆಸ್ ಪರವಾಗಿ ಅರ್ಜಿ ಸಲ್ಲಿಸಿದ್ದೇನೋ ಸರಿ, ಆದರೆ ಚುನಾವಣೆ ನಡೆಯುವುದಕ್ಕೆ ಮುಂಚೆಯೇ ಅವರು ಸ್ವತಂತ್ರರಾದರು. ಇದು ಒಂದು ನಿದರ್ಶನ ಅಷ್ಟೇ. ಇಂಥದ ಇನ್ನೂ ಇವೆ. ಇಂಥಾ ವ್ಯಕ್ತಿಗಳನ್ನು ಚುನಾವಣೆಗೆ ನಿಲ್ಲಿಸಿದ ಕಾಂಗ್ರೆಸ್ ಪ್ರಮುಖರಿಗೆ ಮೂಕಿಗೆ ಬೆಲೆ ಕೊಡುವುದೂ, ಅವರ ಜಯಕ್ಕಾಗಿ ಕೆಲಸಗಾರರು ಶ್ರಮಿಸುವುದೂ ಅತ್ಯವಶ್ಯವೇ ಸರಿ

ಡಾ. ಶ್ರೀ ದೊರಸ್ವಾಮಿ ಮೈಸೂರು
ನಗರದ ಕಾಂಗ್ರೆಸ್ ಕೆಲಸಗಾರ

ಮೈಸೂರು ೧೧

[ಶ್ರೀ ದೊರೆಸ್ವಾಮಿಯವರು ನಿಸ್ಪೃಹ ರಾದ ದೇಶ ಸೇವಕರು. ಅವರ ಅಭಿಪ್ರಾಯಗಳಿಗೆ ನಮ್ಮ ಮನ್ನಣೆ ಇದೆ. ಆದರೂ ಅವುಗಳನ್ನು ನಾವು ಅಂಗೀಕರಿಸಲಾರೆವು. ಏಕೆಂದರೆ ಅವರ ಟೀಕೆಗಳಲ್ಲವೂ ವ್ಯಕ್ತಿಗಳನ್ನು ಕುರಿತೇ ಇರುತ್ತವೆ, ತತ್ವ ಅಥವಾ ಸಂಸ್ಥೆ ಪಕ್ಷವನ್ನಲ್ಲ --ಸಂ]

ಮೈಸೂರು ಫುಟ್‌ಬಾಲ್ ಆಟಗಾರರು ಊಟಿಗೆ

ಮೈಸೂರು ೧೧

ಮೈಸೂರಿನ ಆರ್ಯನ್ಸ್ ಕಂಬೈನ್ಡ್ ಫುಟ್ ಬಾಲ್ ಟೀಮಿನವರು ಫುಟ್ ಬಾಲ್ ಪಂದ್ಯಗಳನ್ನಾಡಲು ಇಂದು ಊಟಿಗೆ ಪ್ರಯಾಣ ಬೆಳೆಸಿದರು. ಈ ಕೆಳ ಕಂಡ ಮೈಸೂರು ಆಟಗಾರರು ಪಂದ್ಯದಲ್ಲಿ ಭಾಗವಹಿಸುವರು:—

ಶ್ರೀಗಳಾದ ಎಂ ಎ ನಂಜುಂಡಯ್ಯ, ಎಂ. ಎಸ್. ತಿಮ್ಮಯ್ಯ, ನಾಯ್ಡು, ವೆಂಕಟರಾಂ, ರಾಮಣ್ಣ, ರಾಯಪ್ಪ, ಭೀಮರಾವ್, ರಾಜಣ್ಣ, ದೊರೆ, ಯತಿರಾಜ್

ಕುದುರೆ ಸುಟ್ಟು ಭಸ್ಮವಾಯಿತು

ಮೊನ್ನೆ ರಾತ್ರಿ ದೇವರಾಜ ಮೊಹಲ್ಲಾದ ಒಂದು ಗುಡಿಸಿಲಿಗೆ ಆಕಸ್ಮಾತ್ ಬೆಂಕಿ ಬಿದ್ದು ಒಳಗೆ ಕಟ್ಟಿಹಾಕಿದ್ದ ಕುದುರೆಯೊಂದು ಸುಟ್ಟು ಹೋಯಿತೆಂದು ಗೊತ್ತಾಗಿದೆ

“ಶ್ರೀ ಕೃಷ್ಣನ ಚರಿತ್ರೆ”

ಬಂದವರು—ಶ್ರೀ ಬಿ ಗೋಪಾಲಯ್ಯನವರು ಕೃಷ್ಣ ಪರಮಾತ್ಮನ ಯೋಗ ಸಾಧನದ ವೇದಾಂತವನ್ನು ವಿವರಿಸಿ, ದುಷ್ಟನಾಶ; ಸಾಧು ಸಜ್ಜನರ ಉದ್ಧಾರವನ್ನು ವರ್ಣಿಸಿ, ಆಕರ್ಷಣೀಯವಾಗಿರುವ ಪುಸ್ತಕ. ಬೆಲೆ ಕೇವಲ ೮ ಆಣೆ ಮಾತ್ರ. ಸರ್ವರ ಮನ್ನಣೆಗೂ ಪಾತ್ರವಾಗಿರುವುದೆಂದರೆ ಅತಿಶಯೋಕ್ತಿಯಾಗಲಾರದು

ಆಗಾಖಾನರ ವಜ್ರೋತ್ಸವ

ಬೊಂಬಾಯಿ ನಗರದಲ್ಲಿ ಆಗಾಖಾನರ ವಜ್ರ ಮಹೋತ್ಸವ ವೈಭವದಿಂದ ಆಚರಿಸಲ್ಪಟ್ಟಿತು. ನಗರವೆಲ್ಲಾ ಸರ್ವಾಂಗ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದು ಆಕರ್ಷಣೀಯವಾಗಿದ್ದಿತು. ವರ್ಣಿಸಲಸದಳವಾದ ವೈಭವಯುತವಾದ ಮೆರವಣಿಗೆ ನಡೆಯಿತು. ವಿಶ್ವದ ನಾನಾ ಭಾಗಗಳಿಂದ ಅವರ ಶಿಷ್ಯ ಮಂಡಲಿಗೆ ಸೇರಿದ ೪೦ ಸಾವಿರ ಮಂದಿ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಗ್ವಾಲಿಯ ಕೆರೆಯ ಮೈದಾನದಲ್ಲಿ ವಿಶೇಷ ರೀತಿಯಲ್ಲಿ ನಿರ್ಮಾಣವಾಗಿರುವ ಮಂಟಪದಲ್ಲಿ ಮೊನ್ನೆ ರಾತ್ರಿ ಆಗಾಖಾನರು ದರ್ಬಾರು ನಡೆಸಿ ಸುಮಾರು ೪೦೦ ಮಂದಿಗೆ ಬಿರುದು ಬಾವಲಿಗಳನ್ನು ಕೊಟ್ಟರು. ನಿನ್ನೆ ಸಾಯಂಕಾಲ ಆಗಾಖಾನರನ್ನು ವಜ್ರದಲ್ಲಿ ತೂಕ ಮಾಡಿ ಅದನ್ನೆಲ್ಲಾ ಅವರಿಗೇ ಅರ್ಪಿಸಲ್ಪಟ್ಟಿತು.

ಬಿಹಾರಿನಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲ

ಬಿಹಾರಿನಲ್ಲಿ ಮಂತ್ರಿಮಂಡಲವನ್ನು ರಚಿಸಲೋಸುಗ ಅಲ್ಲಿನ ಗವರ್ನರು ಶ್ರೀಗಳಾದ ಬಾಬು ರಾಜೇಂದ್ರ ಪ್ರಸಾದ್, ಅನುಗ್ರಹ ನಾರಾಯಣಸಿಂಹ ಮುಂತಾದವರನ್ನು ತಮ್ಮನ್ನು ಭೇಟಿ ಮಾಡುವಂತೆ ಪ್ರಾರ್ಥಿಸಿದ್ದಾರೆ.

ಸಿಂಧ್ ಪ್ರಾಂತ್ಯಕ್ಕೆ ಪ್ರತ್ಯೇಕ ವಿಶ್ವವಿದ್ಯಾನಿಲಯ

ಸಿಂಧ್ ಪ್ರಾಂತ್ಯಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಿಲ್ ಇಂದು ಸರ್ಕಾರದಿಂದ ಪ್ರಕಟಿಸಲ್ಪಟ್ಟಿದ. ಸೆನೆಟ್ ಸಭೆಗೆ ಮುಸಲ್ಮಾನರಿಗೆ ಶೇ ೬೦ ಸ್ಥಾನಗಳನ್ನೂ ಉಳಿದ ೪೦ನ್ನು ಇತರರಿಗೂ ಕೊಡಲಾಗುವುದೆಂದು ಅದರಲ್ಲಿ ಹೇಳಲಾಗಿದೆ

ಭಾರತವನ್ನು ಆದರ್ಶವನ್ನಾಗಿ ಮಾಡುವೆ

ಗುಜರಾತಿನ ಸುಪ್ರಸಿದ್ಧ ಬರಹಗಾರ ... ಮಹಾತ್ಮ ಗಾಂಧಿಯವರು ... ವರ್ಷಕಾಲ ಬದುಕಿ ಭಾರತದಲ್ಲಿ ... ನೂತನ ಪ್ರಪಂಚ ವ್ಯವಸ್ಥೆಯನ್ನು ... ಬೇಕೆಂದಿರುವ ತಮ್ಮ ಆಶಯವನ್ನು ... ವ್ಯಕ್ತಪಡಿಸಿರುವರು.

ವರ್ಕ್ ಷಾಪಿಗೆ ಬೆಂಕಿ

ಪೌಂಡದಲ್ಲಿರುವ ಯು. ಆರ್. ಮತ್ತು ಇಂಜನಿಯರಿಂಗ್ ಕಂಪೆನಿ ... ತಮ್ಮ ನೌಕರರಿಗೆ ಕೊಡುತ್ತಿದ್ದ ... ನ್ನು ಕಡಿಮೆ ಮಾಡಿದುದರ ಫಲ ... ನೌಕರರು ಮೇಲ್ಮಂಡ ಕಂಪೆನಿಗೆ ... ಟ್ಟಿಸಿ, ಗಾಜುಗಳನ್ನೊಡೆದು ... ಘಾಯವನ್ನುಂಟು ಮಾಡಿದರು, ... ಸರು ಬಂದು ಗಲಭೆಯನ್ನು ಅಡಗಿಸಿದ...

ಚಿರತೆ ಹಾವಳಿ

ಸ್ವಂ ಸು.] ಹಿರೀ...

ಈ ಊರಿನಲ್ಲಿ ಚಿರತೆ ಹಾವ... ಜನ ಜಾನುವಾರುಗಳಿಗೆ ತುಂಬಾ ... ರೆಯಾಗಿರುತ್ತೆ. ಸರ್ಕಾರಿ ಅಧಿಕಾ... ನಿಗಾ ಕೊಟ್ಟು ಹಾವಳಿ ತಪ್ಪಿಸ... ಅಗತ್ಯವಾಗಿರುತ್ತೆ.

ನಂಜನಗೂಡು ದೊಡ್ಡ ಜಾ... ದನಗಳ ಪ್ರದರ್ಶನ

೧೪-೩-೪೬ ರ ಆರಂಭವಾಗಿ ... ರವರಿಗೆ ದೊಡ್ಡ ಜಾತ್ರೆ ರಥೋತ್ಸವ ... ಭರ್ದಲ್ಲಿ, ದನಗಳ ಪ್ರದರ್ಶನವನ್ನು ... ಊರಿನ ಜೋಗಿ ತೋಪಿನಲ್ಲಿ ಏರ್ಪಡಿಸಲಾಗಿದೆ... ತ್ತೆ. ನೀರು ನೆರಳಿನ ಸೌಕರ್ಯ ... ಗಿದೆ. ರಾಸುಗಳಿಗೆ ಸುಂಕವಿಲ್ಲ. ... ಹಾಯ ಏರ್ಪಡಿಸಿದೆ. ಉತ್ತಮ ರಾಸು... ಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣ...
ಪ್ರೆಸಿಡೆಂಟ್,
ಟೌನ್ ಮುನಿಸಿಪಲ್ ಕೌನ್ಸಿಲ್
ನಂಜನಗೂಡು

ರೇಷನಿಂಗ್ ಆಫೀಸರ್‌ರವರ ಕಛೇರಿ
ಮೈಸೂರು, ತಾ॥ ೧೧-೩-೪೬

ಪ್ರಕಟಣೆ

ಆಹಾರದ ಅಭಾವದ ಪ್ರಯುಕ್ತ ... ಮುಂದೆ ಟೀ ಪಾರ್ಟಿಗಳು ಸಂತೋಷ ಕೂಟಗಳು, ಸಮಾರಾಧನೆಗಳು, ಮೊದಲಾದ ಸಮಾರಂಭಗಳಿಗೆ ಬೇಕಾಗುವ ಆಹಾರ ಪದಾರ್ಥಗಳಿಗೆ ಇನ್ನು ಮುಂದೆ ಸ್ಪೆಷಲ್ ಪರ್ಮಿಟ್ಟುಗಳನ್ನು ಕೊಡಲಾಗುವುದಿಲ್ಲವೆಂಬ ... ಯವನ್ನು ಈ ಮೂಲಕ ತಿಳಿಯಪಡಿಸಲಾಗಿದೆ. ಮದುವೆ, ಉಪನಯನ, ... ವಿಶೇಷ ಕಾರ್ಯಗಳಿಗೆ ಬೇಕಾಗುವ ... ದ ಪದಾರ್ಥಗಳನ್ನು ಕನಿಷ್ಠ ಪ್ರಮಾಣದಲ್ಲಿ ಕೊಡಲು ವ್ಯವಸ್ಥೆ ಮಾಡಿದೆ

(ಸಹಿ) ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್,
ಮೈಸೂರು ನಗರ.

ಫೋನ್ ನಂ ೩೪೨ ‖ ವಂದೇ ಮಾತರಂ ‖ ಆಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೧೩—೩—೪೬ [ಸಂಚಿಕೆ ೧೭೪

ದಕ್ಷಿಣ ಆಫ್ರಿಕಾದೊಡನೆ ಭಾರತ ಸಂಬಂಧ ತ್ಯಾಗ

...ಪೋಲೀಸರ ಮುಷ್ಕರದ ಬೆದರಿಕೆ

